ಬೇಂದ್ರೆ

• ಬಿ. ಎಚ್. ಶ್ರೀಧರ ಎಂ.ಎ.

ನವೋದಯ ಪ್ರಚಾರ ಪುಸ್ತಕ ಮಾಲೆ-೨

ಬೇಂದ್ರೆ

ಬಿ. ಎಚ್. ಶ್ರೀಧರ, ಎಂ. ಎ.

ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜು
ಉಡುಪಿ.

ಬೆಲೆ: ಆರಾಣೆ.

ಸಂಪಾದಕ ಮಂಡಳಿ:
ಪ್ರಿನ್ಸಿಪಲ್ ಎಚ್. ಸುಂದರ ರಾವ್, ಎಂ. ಎ. (ಪ್ರಧಾನ ಸಂಪಾದಕ)
ಪ್ರೊಫೆಸರ್ ಪಿ. ನಾರಾಯಣ ಅಯ್ಯಂಗಾರ, ಎಂ. ಎ., ವಿದ್ವಾನ್
ಕು. ಶಿ. ಹರಿದಾಸ ಭಟ್ಟ, ಎಂ. ಎ., ವಿದ್ವಾನ್

ಮುದ್ರಕರು: ಬಿ. ಕೃಷ್ಣಯ್ಯ
ಮಣಿಪಾಲ ಪವರ್ ಪ್ರೆಸ್, ಮಣಿಪಾಲ.

ಮುನ್ನುಡಿ

ನವೋದಯದ ಹೊಸಲಲ್ಲಿ ನಿಂತಿರುವ ನಾಡಿನ ಸಹೃದಯರಿಗೆ ನಮ್ಮ ಈ ಪ್ರಚಾರೋಪನ್ಯಾಸ ಮಾಲೆಯಿಂದ ಪ್ರಯೋಜನವಾಗಬಹುದೆಂಬ ಭಾವನೆಯಿಂದ ನಾವು ಈ 'ನವೋದಯ ಪುಸ್ತಕಮಾಲೆ'ಯನ್ನು ಆರಂಭಿಸಿದ್ದೇವೆ. ನಮ್ಮ ಕಾಲೇಜಿನಂಥ ಉಚ್ಚ ಶಿಕ್ಷಣಾಲಯಗಳು ಜನತೆಯ ಸಂಪರ್ಕವನ್ನು ಬೆಳೆಸಬೇಕೆಂದೂ, ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುವುದಷ್ಟೇ ಅಲ್ಲದೆ ದೇಶದ ಮುನ್ನಡೆಗೆ ಮುಖ್ಯವಾದ ಸಾರ್ವಜನಿಕ–ಸಾಮಾಜಿಕ ಶಿಕ್ಷಣದ ಕ್ಷೇತ್ರದಲ್ಲಿಯೂ ಪಾತ್ರವಹಿಸಬೇಕೆಂದೂ ನಾವು ಭಾವಿಸಿದ್ದೇವೆ. ಪ್ರತಿವರ್ಷವೂ ಇದಕ್ಕೋಸ್ಕರ ನಾವು ಕಾಲೇಜಿನಲ್ಲಿ ಮೂರು ದಿನಗಳ ಸಾಂಸ್ಕೃತಿಕ ಉತ್ಸವವನ್ನು ಏರ್ಪಡಿಸಿ, ವಿಶ್ವದ ಸಾಂಸ್ಕೃತಿಕ ರಂಗದಲ್ಲಿ ಪ್ರಮುಖರಾದವರ ಸ್ಥೂಲಪರಿಚಯವನ್ನು ವಿದ್ಯಾರ್ಥಿಗಳಿಗೂ ಸಾರ್ವಜನಿಕರಿಗೂ ಮಾಡಿಸುತ್ತಿದ್ದೇವೆ. 'ಮೊದಲು ಮನೆಯಲ್ಲಿ ದೀಪಹಚ್ಚಿ ಮತ್ತೆ ಮಸೀದಿಯಲ್ಲಿ ಹಚ್ಚು' ಎಂಬಂತೆ ನಾವು ಆರಂಭದಲ್ಲಿ ಕರ್ನಾಟಕದ ಕವಿ–ಲೇಖಕರ ಪರಿಚಯ ಮಾಡಿಸಲೆಳಸಿದ್ದೇವೆ. ಈ ಉಪನ್ಯಾಸಗಳ ಪ್ರಯೋಜನವು ಎಲ್ಲರಿಗೂ ಆಗಲೆಂದು ಇವನ್ನು ಪ್ರಚಾರ ಪುಸ್ತಕಗಳಾಗಿ ಮುದ್ರಿಸಬೇಕೆಂದು ನಿರ್ಧರಿಸಿದುದರ ಫಲವಾಗಿ ಈ ಪುಸ್ತಕವು ಪ್ರಕಟವಾಗುತ್ತಿದೆ. ನಮ್ಮ ಈ ಯೋಜನೆಯಲ್ಲಿ ಸಹಕರಿಸಿದ ಎಲ್ಲರಿಗೂ, ಮುಖ್ಯವಾಗಿ ಲೇಖಕರಿಗೆ, ನಾವು ಕೃತಜ್ಞರು.

ಎಚ್. ಸುಂದರ ರಾವ್
ಪ್ರಧಾನ ಸಂಪಾದಕ.

೧೯೫೬

ಎರಡು ಮಾತು

ಸಾಹಿತ್ಯ ವಿಮರ್ಶೆ ಎಂಬುದು ಸಾಹಿತ್ಯ ಪರಿಚಯು ಸಾಕಷ್ಟಿರುವ ಬಹು ಸಂಖ್ಯಾ ಸಮಾಜದಲ್ಲಿ ಸಾರ್ಥಕ. ಹೊಸ ಗನ್ನಡದ ಇಂದಿನ ಹೊಸ ಸಾಹಿತ್ಯ ಯುಗದಲ್ಲಿ ವಿಮರ್ಶೆಗಿಂತ ಸತ್ಕಾವ್ಯಗಳ ರಸ-ರುಚಿಗಳನ್ನು ಜನರಲ್ಲಿ ಬೆಳೆಸುವ ಪರಿಚ ಯಾತ್ಮಕ ವ್ಯಾಖ್ಯಾನ ಹೆಚ್ಚು ಆವಶ್ಯಕ. ಇಂಥ ಪರಿಚಯು ಗಳಲ್ಲಿ ವಿಮರ್ಶೆಯ ಗಂಭೀರವಾದ ತತ್ವ, ನೀತಿ, ಆದರ್ಶಗಳ ವಿಸ್ತೃತ ವಿವರಣೆಗಳಿಗಿಂತ ಉದಾಹರಣೆಗಳಿಗೇ ಹೆಚ್ಚಿನ ಪ್ರಾಧಾನ್ಯ. ಈ ಅಂಶವನ್ನು ಅನುಭವತಃ ಕಂಡುಕೊಂಡು ದರ ಫಲವಾಗಿ ಕವಿ ಬೇಂದ್ರೆಯವರ ಕಾವ್ಯಮುಖದಿಂದಲೇ ಅವರ ಕಲೆಗಾರಿಕೆಯ ಚೆಲುವು-ಚಮತ್ಕಾರ, ಬೆಡಗು-ಬಿಂಕ, ಐಸಿರಿ-ವೈಸಿರಿ, ಆನಂದ-ಆವೇಶ, ಸ್ಮಿತ-ವಿಸ್ಮಿತಗಳ ಪರಿಚಯು ವನ್ನು ಹೊಸಗನ್ನಡಿಗರಿಗೆ ಮಾಡಿಕೊಡುವ ಅಲ್ಪ ಪ್ರಯತ್ನ ವನ್ನಿಲ್ಲಿ ಪ್ರಾರಂಭಿಸಲಾಗಿದೆ.

'ನಾನೃಷಿಃ ಕುರುತೇ ಕಾವ್ಯಂ' ಎಂಬ ಮಾತು ಇಂದು 'ಅಂಬಿಕಾತನಯದತ್ತ' ಬೇಂದ್ರೆಯವರಿಗೆ ಹೆಚ್ಚಾಗಿ ಅನ್ವಯಿ ಸುತ್ತದೆ. ಅವರ ಪದ್ಯಗಳಲ್ಲಿ ಕಠಿಣ ಪದಗಳ ಸಂಖ್ಯೆ ಅಲ್ಪ. ಆದುದರಿಂದ ಆ ಪದ್ಯಗಳು ಸ್ವಯಂಪ್ರಭ; ಆ ಸ್ವಯಂಪ್ರಭೆಗೆ ಹೆಚ್ಚಿನ ಅರ್ಥ ವಿವರಣೆ ಅಡ್ಡಗೋಡೆಯೇ ಆದೀತು. ಪುನಃ ಪುನಃ ಓದಿ, ಕೇಳಿ ಅವುಗಳಲ್ಲಿಯ ಸತ್ಯ, ಸುಂದರ, ಶಿವ, ಉಪ ಯುಕ್ತ ಅರ್ಥಗಳನ್ನು ಕೋಮಲ-ಕಠೋರ, ಮಧುರ-ಕಟು ವಿಸ್ಮಾಯಕ-ವಿಷಾದಕ, ವಿಭಾವ, ಅನುಭಾವ, ವ್ಯಭಿಚಾರಿ ಭಾವಗಳನ್ನು ರಸಿಕರೇ ಅನುಭವಿಸಬೇಕು, ರಸಯೋಗಿಗಳೇ


ಧೇನಿಸಿ ರಸಸಮಾಧಿ ಹೊಂದಬೇಕು. 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ' ಅಥವಾ 'ಭೀಮಕಾಂತೈಃ ಕವಿಗುಣೈಃ ಸತಾಂ ಚೇತಃ ಸದಾಽದ್ಭುತಂ' ಎಂದ ಹಾಗೆ ಅತ್ತ ಪಾತಾಳದ ತಳವನ್ನು ತೂರಬಲ್ಲ, ಇತ್ತ ವಿಯತ್ತ್ತಳವನ್ನು ಏರಬಲ್ಲ ಭಾವ-ರಸ ಶಕ್ತಿಗಳ ಮಹಾಯಾನವೆನಿಸಿದ ದತ್ತ ಕೃತಿಗಳ ಅಲ್ಪ ಪರಿಚಯ ಇಲ್ಲಿ ರಸಿಕರಿಗಾದರೆ ಈ ಬರಹ ಸಾರ್ಥಕ, ಸಫಲ.

ಮಹಾಕವಿ ಬೇಂದ್ರೆಯವರ ಪದ್ಯಗಳನ್ನು ಕುರಿತು ಉಪನ್ಯಾಸವೀಯಲು ನನ್ನನ್ನು ಆಮಂತ್ರಿಸಿ ಅದಕ್ಕೆ ೫-೧೧-೫೫ ರಲ್ಲಿ ಸದವಕಾಶ ಕಲ್ಪಿಸಿಕೊಟ್ಟ ಎಂ. ಜಿ. ಎಂ. ಕಾಲೇಜಿನ ರಸಯಜ್ಞಹೋತಾರರೆಲ್ಲರಿಗೂ ಈ ಮೂಲಕ ಹೃತ್ಪೂರ್ವಕ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ.

ಕುಮಟಾ,
೧೫—೧೨—೧೯೫೫

ರಸಿಕ ವಿಧೇಯ
ಬಿ. ಎಚ್. ಶ್ರೀಧರ.

ಅಧ್ಯಾಯ ಸೂಚಿಕೆ



M. S. Shiraii

ಕವಿ ಬೇಂದ್ರೆ

ವಿಷಯೋಪಕ್ರಮ

ಮಹಾಕವಿ ಬೇಂದ್ರೆಯವರು ಕವಿಗಳು, ನಾಟಕಕಾರರು ಹಾಗೂ ಲಲಿತಪ್ರಬಂಧ ಮತ್ತು ವಿಮರ್ಶೆಗಳನ್ನು ಹೊಸ ಕನ್ನಡದಲ್ಲಿ ಬರೆದವರು. ಅವರ ಊರು ಧಾರವಾಡ, ಅವರ ಮನೆ ಸಾಧನಕೇರಿಯಲ್ಲಿ; ಸದ್ಯ: ಸೊಲ್ಲಾಪುರದ ಡಿ. ಎ. ವಿ. ಕಾಲೇಜಿನಲ್ಲಿ ಅವರು ಪ್ರಾಧ್ಯಾಪಕರಾಗಿದ್ದಾರೆ; ವಯಸ್ಸು ಸುಮಾರು ಅರುವತ್ತಕ್ಕೆ ಹತ್ತಿರ.

ಪ್ರಸ್ತುತ ನಾವು ಮಾಡುವುದು ಕವಿಬೇಂದ್ರೆಯವರ ಅಥವಾ ಕವಿ 'ಅಂಬಿಕಾತನಯದತ್ತರ' ಸಂದರ್ಶನವನ್ನು. ಅವರ ಕವನಕೃತಿಗಳು ರಸತೀರ್ಥಗಳು, ಅವುಗಳಲ್ಲಿ ಮುಖ್ಯವಾದವುಗಳೆಂದರೆ—ಮೂರ್ತಿ ಮತ್ತು ಕಾಮಕಸ್ತೂರಿ, ಗರಿ, ನಾದಲೀಲೆ, ಉಯ್ಯಾಲೆ, ಮೇಘದೂತ, ಹಾಡುಪಾಡು, ಸಖೀಗೀತ, ಗಂಗಾವತರಣ ಮತ್ತು ಸಿರಾಭರಣ ಸುಂದರಿ. ಕೊನೆಯದು ಗದ್ಯಪದ್ಯಮಯ; ಮಿಕ್ಕವೆಲ್ಲ ಕವನ ಸಂಕಲನಗಳು.

ಬೇಂದ್ರೆಯವರ ಕವನಗಳಲ್ಲಿ ಭಾವಗೀತ, ಖಂಡಕಾವ್ಯ, ಅಷ್ಟಷಟ್ಪದಿ ಮತ್ತು ಸೀಸಪದ್ಯ ಎಂಬ ವರ್ಗಗಳನ್ನು ಮಾಡಬಹುದು. ಸಖೀಗೀತವೊಂದು ಖಂಡಕಾವ್ಯ, ಮೇಘದೂತ ಅವರು ಕನ್ನಡಿಸಿದ ಖಂಡಕಾವ್ಯ; ಅಷ್ಟಷಟ್ಪದಿ, ಸೀಸಪದ್ಯ ಮತ್ತು ವಚನ ಅಥವಾ ನವ್ಯಕಾವ್ಯಗಳು ಉಯ್ಯಾಲೆಯಲ್ಲಿವೆ. ಮಿಕ್ಕೆಡೆಯೆಲ್ಲ ಭಾವಗೀತೆಗಳು ಮತ್ತು ಹಾಡುಗಳು ಹಾಗೂ ಜಾನಪದ ಗೀತೆಗಳು ತುಂಬಿವೆ.

ಬೇಂದ್ರೆಯವರು ಉಭಯಕವಿಗಳು–ಕನ್ನಡದಲ್ಲಿ ಮತ್ತು ಮರಾಠಿಯಲ್ಲಿ; ಅವರು ಉಭಯರಂಜನರು—ಪಂಡಿತರಿಗೆ ಮತ್ತು ಪಾಮರರಿಗೆ; ಅವರು ಉಭಯಕುಶಲರು—ಲೌಕಿಕದಲ್ಲಿ ಹಾಗೂ ಪಾರಲೌಕಿಕದಲ್ಲಿ. ಯಾವನೇ ಆಗಲಿ ಬೆಂದರೆ ಬೇಂದ್ರೆಯಾದಾನು. ಅನುಭವ, ಪಕ್ವವಾದಾಗಲೇ ವರಕವಿತ್ವಲಭಿಸೀತು!

ಬೇಂದ್ರೆಯವರ ಕವನಗಳಲ್ಲಿ ಪದ ಲಲಿತ; ಅರ್ಥ ಗಭೀರ ಮತ್ತು ಕೆಲವೊಮ್ಮೆ ಸಾಂಕೇತಿಕ. ಅರ್ಥವೆಲ್ಲ ಭಾವ—(=ಭಾವನಾ ಪ್ರಧಾನ ಬುದ್ಧಿ)-ವ್ಯಂಜಕ, ರಸಸಾಧಕ. ಭಾವಗಳು ಚಿರಂತನ. ಆದರೆ ಅವುಗಳ ವಾಹಕಗಳಾದರೋ ಕಾಲಾನುಗುಣವಾಗಿ ನವೀನ. ಉತ್ಸಾಹ, ಶೋಕ ಮುಂತಾದ ಭಾವಗಳು ಹೊಸಕವಿಯಲ್ಲಿ ಹೊಸವಾಗಿ ತೋರಲು ಆತನ ಶೈಲಿಯೇ ಕಾರಣ; ಹೊಸಹೊಸ ಬೌದ್ಧಿಕ ಅಭಿಪ್ರಾಯಗಳು ಹೊಸಕಾವ್ಯದಲ್ಲಿ ಬಂದಿವೆ; ಆದರವು ಭಾವಪೋಷಕ ಅಂಗಗಳಲ್ಲದೆ ಯಾವ ಕಾವ್ಯದಲ್ಲೂ ಭಾವರಸಗಳನ್ನು ಮೀರುವ ಪ್ರಾಧಾನ್ಯವನ್ನು ಪಡೆಯಲಾರವು.

ಎರಡನ್ನೇ ಹೋಲಿಸಿದರೆ ನಾದಮಯವೆನಿಸಿದ ಸಂಗೀತ ಪ್ರಾಕೃತ, ಮೂಕು ಮೊಗ್ಗೆ; ಕಾವ್ಯ ಸಂಸ್ಕೃತ, ಮಾತಿನ ಅರಳು. ಕಥನ, ವರ್ಣನ, ಭಾವನ, ಬೋಧನಗಳು ಕಾವ್ಯದ ಚತುರಂಗ. ಆದರಿಂದ ಅನುಕ್ರಮವಾಗಿ ಕಥನ ಕವನ, ವರ್ಣನಕವನ, ಭಾವಗೀತ, ಬೋಧಗೀತಗಳಾಗಿವೆ. ಯಾವ ಅಂಗ ಪ್ರಧಾನವಾಗಿದೆಯೋ ಅದರ ಮೇಲಿಂದ ಕಾವ್ಯದ ಜಾತಿಯನ್ನು ಗುರುತಿಸಲಾಗುವುದು. ಕಥನಕವನ ಸುಲಭವೇದ್ಯ. ಸೂರ್ಯೋದಯಾದಿ ವರ್ಣನ ಸುಪ್ರಸಿದ್ಧ. ಪ್ರೇಮ,

ಜಿಗುಪ್ಸೆ, ಹಾಸ್ಯ, ಶೋಕ, ಉತ್ಸಾಹ, ಕ್ರೋಧ, ಭಯ ಮುಂತಾದ ಭಾವಗಳನ್ನು ಮೂಡಿಸುವ ಪದ್ಯಗಳು ಸುಪರಿಚಿತ. ನೀತಿ, ತತ್ವಗಳನ್ನು ಬೋಧಿಸುವ ಪದಗಳು ಜನಪ್ರಿಯ. ಯಾವುದಾದರೊಂದು ಅನುಭವ, ಅಭಿಪ್ರಾಯ, ನೆನಹು, ತಿಳಿವು, ಕಲ್ಪನೆ, ಕನಸು, ಕಾಣ್ಕೆ ತನಗಾಗಿದೆಯೆಂದು ಕವಿ ಹೇಳುವುದೊಂದು ಬಗೆ, ಮಂದಿಗಾಗಿದೆ ಎಂಬುದೋ ಮತ್ತೊಂದು ಬಗೆ; ಎಲ್ಲರಿಗೂ ಆಗಿದೆ ಎನ್ನುವುದು ಇನ್ನೊಂದು ಬಗೆ. ಕಥನಕವನದಲ್ಲಿ ಅವನ, ಅವಳ, ಅವರ ಅನುಭವ ಮುಂತಾದುವನ್ನು ಹೇಳುವುದು ರೂಢಿ. ಭಾವಗೀತಗಳಲ್ಲಿ ತನ್ನ ಅನುಭವ ಇತ್ಯಾದಿಗಳನ್ನು ಹೇಳುವುದು ಕ್ರಮ. ವರ್ಣನೆಯಲ್ಲಿ ಎಲ್ಲರ ಅನುಭವಾದಿಗಳೆಂದು ರೂಪತಃ ತೋರುವಂತೆ ಹೇಳುವುದು ಸಾಮಾನ್ಯ. ಬೋಧನದಲ್ಲಿ ನೀನು, ನೀವುಗಳು ಬರುವುದು ಹೆಚ್ಚು, ಒಮ್ಮೆ ನಾವೆಂಬುದೂ ಬಂದೀತು. ಸಂವಾದ ಬಂದಲ್ಲಿ ನಾಟಕೀಯತೆಯನ್ನು ಗುರುತಿಸಲಾದೀತು. ವಾದದಲ್ಲಿ ಬೌದ್ಧಿಕತೆಯು ಎದ್ದು ನಿಂತೀತು; ಶಬ್ದಾಲಂಕಾರ ಹೆಚ್ಚಿದ್ದಲ್ಲಿ ಸಾಂಗೀತಿಕ ಗುಣವನ್ನು ಗೊತ್ತುಹಚ್ಚಲಾದೀತು. ಇವು ಕವನದ ಒಳವಗೆಗಳು, ಅಂತಃಸ್ವರೂಪಗಳು.

ಅರ್ಥದಲ್ಲಿ ವಾಚ್ಯ, ಸೂಚ್ಯಗಳು ಲಕ್ಷ್ಯ. ಕಾಲದಲ್ಲಿ ಅದ್ಯಾನದ್ಯತನ ಭೂತ ಮುಖ್ಯ. ದೇಶದಲ್ಲಿ ಆವರಣಲಕ್ಷಣ ಗಣ್ಯ. ಸಂದರ್ಭವು ಕಥನದಲ್ಲಿ ಸ್ಪಷ್ಟ; ವರ್ಣನೆಯಲ್ಲಿ ಈಷತ್ ಸ್ಪಷ್ಟ; ಭಾವಗೀತದಲ್ಲಿ ಅಸ್ಪಷ್ಟ, ಊಹ್ಯ; ಬೋಧೆಯಲ್ಲಿ ಅನವಶ್ಯಕ, ಸುಲಭೋಹ್ಯ. ಈ ನಾಲ್ಕೂ ಸೂಚ್ಯವಾಗಿದ್ದರೆ ಶ್ರೇಷ್ಠ; ನಾಲ್ಕನೆಯದು ವಾಚ್ಯವಾದರೆ ಅಧಮ. ಚತುರ್ವಿಧ ಕವನಗಳಲ್ಲಿ ನಡುವಿನೆರಡು ಬೇಂದ್ರೆಯವರ ಕೃತಿಗಳಲ್ಲಿ

ಬಹಳ. ಅವುಗಳ ವ್ಯಂಜಕ ಅಥವಾ ಶರೀರ ಎಂತಿದೆ ಎಂಬುದನ್ನೇ ಅವಲಂಬಿಸಿ ವಿಮರ್ಶಿಸಲಾರಂಭಿಸೋಣ. 'ಶರೀರಂ ತಾವದಿಷ್ಟಾರ್ಥವ್ಯವಚ್ಛಿನ್ನಾ ಪದಾವಲೀ—ಕವಿಗೆ ಇಷ್ಟವಾದ ಅರ್ಥವನ್ನು ಪ್ರತ್ಯೇಕಿಸಿ ಹೇಳುವ ಪದಪುಂಜವೇ ಶರೀರ! ಜಗತ್ತಿನ ಅರ್ಥಗಳಲ್ಲಿ ಚೆಲುವಾದುದು, ಚೆಲುವಲ್ಲದುದು ಎಂದು ಉದ್ದಿಷ್ಟ ಪ್ರಸಂಗಾನುಗುಣವಾಗಿ ಆಯುವುದು ಕವಿಯ ಬಗೆಗಣ್ಣು. ಅವನಾಯ್ದ ಅರ್ಥ ಪದಸಂಘಟನಾ ರೂಪದ ಅವನ ಶೈಲಿಯಲ್ಲಿ ಮೂಡಿ ರಸಿಕಮನದಲ್ಲಿ ಚಿತ್ತಸಾತ್ಮ್ಯಹೊಂದುವುದು, ಚೇತನೆಯಿಂದ ಉಸಿರಾಡಿಸುವುದು.

ಹೊಸಗನ್ನಡ ಕಾವ್ಯ (=ಕವನ) ನಡುಗನ್ನಡದ ಆರು ಷಟ್ಪದಿಗಳ ಗಣವಿನ್ಯಾಸ ಕ್ರಮವನ್ನೇ ಅವಲಂಬಿಸಿದ್ದು. ಅಂಥ ಗಣವಿಲ್ಲದ್ದು ವಚನ ಕಾವ್ಯ. ಗಣದ ಲೆಕ್ಕಾಚಾರ ಮೂರು, ನಾಲ್ಕು, ಐದರ ಮುಗ್ಗಿಯನ್ನವಲಂಬಿಸಿದ್ದು. ಗುರು ಲಘುಗಳ ಲೆಕ್ಕ ಸಾಮಾನ್ಯ; ಪ್ಲುತಪ್ರಯೋಗ ಕೆಲವೆಡೆ ವಿಶೇಷ ಮತ್ತು ಅಪೂರ್ವ, ಸಾಂಗತ್ಯವೊಂದರಲ್ಲಿ ಮಾತ್ರ ನಿತ್ಯ—ಅದರಿಂದ ಹುಟ್ಟಿದ ತ್ರಿಪದಿ-ಚೌಪದಿಗಳಲ್ಲಿ ಅದೇ ನಿಯಮ. ಬೇಂದ್ರೆಯವರ ಕವನಗಳು ಹೆಚ್ಚಾಗಿ ತಾಳ ಲಯಗಳಿಂದ ಬದ್ಧ, ದ್ವಿತೀಯಾಕ್ಷರ ಅಥವಾ ಅಂತ್ಯಾಕ್ಷರ ಪ್ರಾಸಗಳಿಂದ ಮಧುರ.

I

ಸ್ಫೂರ್ತಿ

ಸ್ಫೂರ್ತಿಯೆಂದರೆ ದೈವಿಕ ಚೈತನ್ಯ ಕವಿಯಲ್ಲಿ ತುಂಬಿ ಬರುವುದು, ಅದೊಂದು ಆಧ್ಯಾತ್ಮಿಕ ಜೀವನದ ಕಾರ್ಯ

ಒಂದೇ ಬಾರಿಗೆ ಇಡಿ ಪದಾರ್ಥವೊಂದರ ಸ್ಪಷ್ಟ ಕಲ್ಪನೆಯಾಗುವುದು—ಎಂದು ಮುಂತಾಗಿ ಹೇಳಲಾಗುತ್ತದೆ. ಅದೊಂದು ಕಾವ್ಯಸತ್ಯವನ್ನು ಅಥವಾ ಸೌಂದರ್ಯವನ್ನು ಕಾಣಿಸುವ ಪ್ರಜ್ಞಾಪ್ರಕಾಶ. ಹುಡಿಯನ್ನು ಇಡಿಯಾಗಿ ಕಾಣುವುದೇ ರಸ ಇಲ್ಲವೆ ಸೌಂದರ್ಯದೃಷ್ಟಿ. ಈ ಇಡಿಗಾಣ್ಕೆಯ ಕಸು ಬೇಂದ್ರೆಯವರಿಗೆ ಮೊದಲಿಂದ ಇತ್ತು. ಅದರಿಂದಲೇ ಅವರ ಆಧ್ಯಾತ್ಮಿಕ ಪ್ರವೃತ್ತಿಯೂ ಬೆಳೆಯುತ್ತ ಹೋಯಿತು. ಶಿಲೆಯೊಳಗೆ ಸೆಲೆಯಾಗಿ ಉಕ್ಕಿಹರಿದಂತೆ ಬೇಂದ್ರೆಯವರಲ್ಲಿ ಸ್ಫೂರ್ತಿಯ ವಾಣಿ ನಾದ, ಪದ, ಅರ್ಥ, ಅಲಂಕಾರ, ಚಮತ್ಕಾರಗಳೊಡನೆ ಬುಗ್ಗೆಯಾಗಿ ಚಿಮ್ಮಿಹರಿಯಿತು. ಅನ್ನ, ಪ್ರಾಣ, ಮನಸ್, ವಿಜ್ಞಾನ, ಆನಂದ ರೂಪದ ಪ್ರಜ್ಞೆಗಳಲ್ಲಿ ಉತ್ತರಸ್ಥ ನೆಲೆಗಳಿಂದಲೇ ಬೇಂದ್ರೆಯವರು ಸ್ಫೂರ್ತಿಯನ್ನು ಪಡೆದದ್ದು ಅವರ ಕೆಲವೇ ಕವನಗಳಲ್ಲಿ ಎದ್ದು ಕಾಣುತ್ತದೆ. ಅವರ ವಾಣಿ ವೀರ್ಯವತಿಯಾಗಲು ಅವರಲ್ಲಿ ಅಪಾರ ಪ್ರಾಣಚೇತನೆ ತುಂಬಿರುವುದೇ ಕಾರಣ. ಕವಿತೆಯ ಸ್ಫುರಣದ ಬಗೆಯನ್ನು ಅವರೇ ವಿವರಿಸಿದ್ದು ಇಂತಿದೆ.

ಗಾಳಿ ಕಿರಿಸುಳಿ ಹುಟ್ಟಿತು
ತಾನೆ ತುಸ ಕಣ್ಬಿಟ್ಟಿತು
ಮೆಲ್ಲನೆದೆಯನು ತಟ್ಟಿತು
ಅದುವೆ ಆಗಸ ಮುಟ್ಟಿತು
ಕಣ್ಣು ಬಣ್ಣವನಿಟ್ಟಿತು
ಉಸಿರು ನಡಿಗೆಯ ಕೊಟ್ಟಿತು
ನೆವಕೆ ನುಡಿಯನ್ನುಟ್ಟಿತು
ಕವನ-ವೇಷವ ತೊಟ್ಟಿತು.

ಜಗತ್ತಿನ ಎಲ್ಲವುದಕ್ಕೂ ಕ್ರಿಯಾಶಕ್ತಿಯುಂಟಾದದ್ದು ಮಾತರಿಶ್ವ ಅಥವಾ ಗಾಳಿಯ ತತ್ವದಿಂದ ಎಂದು ಈಶಾವಾಸ್ಯದಲ್ಲಿ ಬರುತ್ತದೆ. ಆದ್ದರಿಂದ ಕವಿಯ ಮಾನಸಜಗತ್ತಿನಲ್ಲಾದರೂ ಸ್ಫುರಣಕ್ರಿಯೆ ಆ ತತ್ವದಿಂದಲೇ ಆಗಬೇಕಲ್ಲವೆ? ಹಾಗೆ ಒಮ್ಮೆ ಸ್ಫುರಿಸಿದ ಅಂಶ ತೆರೆಯಂತೆ ಅರಳಿ ಹೃದಯಾಕಾಶವನ್ನು ವ್ಯಾಪಿಸಿ ಇಂದ್ರಿಯಲೋಕದ ಬಣ್ಣವನ್ನು ಕೊಂಡು ರೂಪಿತವಾಗಿ ಅನಂತರ ಆ ರೂಪ ನುಡಿ ಅಥವಾ ನಾಮವನ್ನು ತಳೆದು ಕವನದ ಉಡುಗೆಯಿಂದ ಹೊರಬಿದ್ದು ರಸಿಕರಿಗೆ ಎದುರಾಯಿತು. ಇದೇ ಅಭಿಪ್ರಾಯವನ್ನು ಹೆಚ್ಚು ಕಡಿಮೆ ಈ ಕೆಳಗಿನ ಅವರ ಮಾತಿನಲ್ಲೂ ಕಾಣಬಹುದು.

ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸಾ
ಮಸೆದ ಗಾಳಿ ಪಕ್ಕ ಪಡೆಯುತಿತ್ತು ಸಹಜ ಪ್ರಾಸಾ
... ...
ಒಡಲ ನೂಲಿನಿಂದ ನೇಯುವಂತೆ ಜೇಡ ಜಾಲಾ
... ...
ತಿರುಗುತಿತ್ತು ತನ್ನ ಸುತ್ತ ಮೂಕ ಭಾವಯಂತ್ರ
ಗರ್ಭಗುಡಿಯ ಗರ್ಭದಲ್ಲಿ ಪಡಿನುಡಿಯುವ ಮಂತ್ರ
... ... (೧) 2

ಲಯದ ಬಸಿರ ಬಯಲಲ್ಲಿ ದೇವಭವ ಬೀಜಬಿತ್ತಿದಾಕೆ
ಮೂಕು ಮೊಗ್ಗೆ ಮುನ್ನೂಕಿ ಬಂಡಿನಲಿ ತಲೆಯನೆತ್ತಿದಾಕೆ
ರಸವ ಹೀರಿ ತಾನಾರಿದಾತನಿಗೆ ಹೇಗೊ ರುಚಿಸಿದಾಕೆ
ಸಾಕ್ಷಿಪುರುಷನಾ ಅಕ್ಷಿಯಲ್ಲಿ ಪ್ರತ್ಯಕ್ಷ ರಚಿಸಿದಾಕೆ (೨) 3

ಸೃಷ್ಟಿಯಲ್ಲಿ ಅವ್ಯಕ್ತವು ಅಥವಾ ನಮ್ಮ ಅರಿವಿನ ಅಳವಿಯನ್ನು ಮೀರಿದ ತತ್ವವು ವ್ಯಕ್ತವಾಗುವಾಗಿನ ಕಾರ್ಯಗತಿ

ಯಂತೆ ಕವಿಚೇತನೆಯಲ್ಲಾದರೂ 'ಅಕಸ್ಮಾತ್' ಎಂದು ಭಾಸವಾಗುವ ರೀತಿಯಲ್ಲಿ ಭಾವದ ಮೊಗ್ಗೆ ಮೂಡಿ ಅರಳಿ ಕವನವಾಗಿ ನಿಲ್ಲುತ್ತದೆ. ಇದು ಬೇಂದ್ರೆಯವರು ಬರೆದಿಟ್ಟ ಸ್ವಾನುಭವ. ಅವರಿಗೆ ಭಾವಕಲ್ಪನೆಗಳು ಹೊಳೆದದ್ದು ಇಂಥ ಪ್ರತಿಭಾಭೃಂಗದ ಮೂಲಕ. ಪ್ರತಿಭೆ ಎಂಬ ಈ ಅಂತಶ್ಚೇತನೆ ಅಂಬಿಕಾತನಯದತ್ತರಿಗೆ ದೈವದತ್ತ. ಅದರಿಂದ ಹುಟ್ಟಿದ ಕವನವು ಎಂಥದು?

ಅದರ ನೋಟವು ಬಟ್ಟಿತು
ನಾಕ ನರಕವ ಮುಟ್ಟಿತು. 4

ಆ ಕವನ ಗಾಯತ್ರಿಯ ಹಾಡಿಗೆ ವಸ್ತುವಾಗದುದಿಲ್ಲ. ಅದು ವಿಶ್ವವ್ಯಾಪಕವಾದದ್ದು, ಅದರ ಸಹಜಗತಿ ಹೇಗಿದೆಯೆಂದರೆ—

ಪಾದ ಪದ್ಧತಿಯಲ್ಲಿ ಪದಕೂಡಿ ಬರುವಾಗ
ಯಾರಾರೆ ಗುರು-ಲಘು ಎಣಿಸುವರೆ?
... ...
ಕೊಟ್ಟದ್ದೆ ರೂಪವು ಇಟ್ಟದ್ದೆ ನಾಮವು
ಕಟ್ಟದ್ದೆ ಹುರುಳೆಂಬ ಮುದದೊಳಿರೆ
ಬ್ರಹ್ಮಪಟ್ಟವನೇರಿ ರೂಪಕ ಶಕ್ತಿಯು
ಸೃಷ್ಟಿಯನೆಳೆದಿತು ದೃಷ್ಟಿಯೊಳೆ 5

'ಋಷೀಣಾಂ ಪುನರಾದ್ಯಾನಾಂ ವಾಚಮರ್ಥೋಽನುಧಾವತಿ' ಎಂಬ ಬಗೆಯ Depersonalised State ಕವಿಮನದ ನಿರಹಂಕಾರ ಅವಸ್ಥೆಯೇ ಸ್ಫೂರ್ತಿಯ ಪ್ರವೇಶಕ್ಕೆ ತಕ್ಕ ಆವರಣ. ಈ ಮಾನಸ ಅವಸ್ಥೆಯಲ್ಲಿ ಕವಿ ಕರ್ತನಲ್ಲ. ಕೇವಲ ಕರಣ ಅಥವಾ ಸಾಧನ! ಅವನು ಕೊಳಲಾದರೆ

ಅವ್ಯಕ್ತಪ್ರಜ್ಞೆ ತಾನೇತಾನಾಗಿ ಅವನಮೂಲಕ ಹಾಡಾಗಿ ಹರಿದು ಹೊರಗಿಳಿಯುತ್ತದೆ. ಅಹಂಪ್ರಜ್ಞೆ ಅಳಿದ ತತ್ಕಾಲದಲ್ಲಿ ಬರುವುದೇ ರಸಸ್ಫೂರ್ತಿ. ಅದರಿಂದ ಹೊರಡುವುದೇ ಪ್ರಾಸಾದಿಕ ವಾಣಿ. ಬೇಂದ್ರೆಯವರ ಪ್ರಸನ್ನ ಕವಿತಾಗುಣ ಇದಕ್ಕೆ ನಿದರ್ಶನ. ಒಂದು ವಸ್ತುವನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳಲು ಈ ತನ್ಮಯಭಾವ ಅವಶ್ಯಕ. ಕವಿಯ ಅಹಂಶಕ್ತಿ ವರ್ಣನೀಯ ವಸ್ತುವಿನಲ್ಲಿ ಲೀನಹೊಂದಿದಾಗಲೇ ವರ್ಣನೆ ಸಮರ್ಥವಾಗುವುದು. ಈ ಲಯಸಿದ್ಧಿ ಅಪೂರ್ವ ಸಾಮಾನ್ಯ ಕವಿಗಳಲ್ಲಿ. ವರಕವಿಗಷ್ಟೇ ಇದು ಹಸ್ತಗತ.

II

ಸಂಸ್ಕಾರ ಮತ್ತು ಆವರಣ

ಬೇಂದ್ರೆಯವರ ಮನದ ಹಾಗೂ ಮಾತಿನ ಶೈಲಿಯನ್ನು ರೂಪಿಸಲು ಕಾರಣವಾದ ಆವರಣ ಮತ್ತು ಸಂಸ್ಕಾರಗಳು ಗಮನೀಯ. ಬಯಲುಸೀಮೆ ಮಲೆನಾಡುಗಳು ಸಂಧಿಸುವ ಗ್ರಾಮಸ್ತೋಮಗಳಿಂದ ಕೂಡಿದ ಧಾರವಾಡದ ಆವರಣ ಅವರ ಸ್ಥಾಯಿ ಮನೋಧರ್ಮವನ್ನು ದೃಢಗೊಳಿಸಲು ಕಾರಣವಾದದ್ದನ್ನು ಅವರ ವಾಣಿಯಿಂದಲೇ ತಿಳಿದುಕೊಳ್ಳಬಹುದು. ಅವರ ಗಂಗಾವತರಣದಲ್ಲಿಯ 'ಬಾರೊ ಸಾಧನಕೇರಿಗೆ' ಎಂಬ ಪದ್ಯದಲ್ಲಿ—

ಮಳೆಯು ಮೊಗವೇ ಹೊರಳಿದೆ
ಕೋಕಿಲಕೆ ಸವಿ ಕೊರಳಿದೆ
ಬೇಲಿಗೂ ಹೂ ಬೆರಳಿದೆ
ನೆಲಕೆ ಹರೆಯವು ಮರಳಿದೆ
ಭೂಮಿತಾಯ್ ಒಡಮುರಿದು ಎದ್ದಳೊ
ಶ್ರಾವಣದ ಸಿರಿ ಬರಲಿದೆ.

ಎಂದಿದೆ. ಅವರ ನಿಸರ್ಗಪ್ರೀತಿ, ಶ್ರಾವಣಪ್ರೇಮಗಳು ಇನ್ನೂ ಇತರ ಅನೇಕ ಕವನಗಳಲ್ಲಿ ಕಾಣಬಹುದು. 'ಧಾರವಾಡದ ತಾಯೇ ನನಗಾ। ಧಾರ ನಿನ್ನದಲ್ಲದಿಲ್ಲ' ಎಂದು 'ಸಖೀಗೀತ'ದಲ್ಲಿ ಅವರು ಹೇಳಿರುವುದೂ ಇದಕ್ಕೆ ಸಾಕ್ಷಿ. ಅದೇ ಸಂಗ್ರಹದಲ್ಲಿಯ 'ಹುಬ್ಬಳ್ಳಿಯಾಂವಾ' ಎಂಬ ಪದ್ಯದಲ್ಲಿ

'ಭಾರಿ ಜರದ ವಾರಿರುಮಾಲಾ ಸುತ್ತಿಕೊಂಡಾಂವಾ
ತುಂಬ ಮೀಸಿ ತೀಡಿಕೋತ ಹುಬ್ಬ ಹಾರಸಾಂವಾ
ಮಾತುಮಾತಿಗೆ ನಕ್ಕನಗಿಸಿ ಆಡಿಸ್ಯಾಡಾಂವಾ
ಏನೊ ಅಂದರ ಏನೋ ಕಟ್ಟಿ ಹಾಽಡ ಹಾಡಾಂವಾ' 7

ಎಂಬ ರಸಿಕನ ಚಿತ್ರದೆದುರು ಹಲಸಂಗಿಯ ಲಾವಣಿಯ—

'ಚಕ್ಕರ್‌ಗಣ್ಣ ಕೊಕ್ಕರೆ ಮೀಸಿ
ನಕ್ಕರ್ ಚಂದ ನನ್ನ ಮುಂದ
ತೊಟ್ಟ ಅಂಗಿ ಹೊತ್ತ ಶಾಲು ಜರತಾರ
ಇವ। ಹತ್ತು ಮಂದ್ಯಾಗ್ ಮುತ್ತಿನಂಥ ಸರದಾರ'

ಎಂಬುದನ್ನಿಟ್ಟರೆ ಬೇಂದ್ರೆಯವರ ಸುಪ್ರಿಯ ಜನಾವರಣ ನಮ್ಮ ಕಣ್ಣಿಗೆ ಕಟ್ಟುತ್ತದೆ; ಅವರು ಅಲ್ಲಲ್ಲಿ ಮಾಡುವ ಗ್ರಾಮ್ಯಪದದ ಪ್ರಯೋಗಕ್ಕೆ ಕಾರಣ ಗೊತ್ತಾಗುತ್ತದೆ. ಈ ಗ್ರಾಮಪ್ರಿಯ ಗುಣವೇ ಅವರನ್ನು ನಿಸರ್ಗ ಸಹಜ ರಸಿಕರನ್ನಾಗಿ ಮಾಡಿದ್ದು; ಅಕೃತಕ ವ್ಯಕ್ತಿಗಳನ್ನಾಗಿ ರೂಪಿಸಿದ್ದು; ಚತುರೋಕ್ತಿಗಳ ಗಣಿಯನ್ನಾಗಿ ಪಳಗಿಸಿದ್ದು. ಅದರಿಂದಲೇ ಅವರ ಕೈಯಿಂದ 'ಬೆಳಗು', 'ರಸಿಕಾಪೇಕ್ಷೊ', 'ಮಾಯಾಕಿನ್ನರಿ', 'ಕುರಡುಕಾಂಚಾಣಾ', 'ನಾನೊಂದು ನೆನೆದರೆ', 'ನಗೀನವಿಲು', 'ರಾಗರತಿ', 'ಪಾತರಗಿತ್ತಿ ಪಕ್ಕ' ಮತ್ತು 'ನನ್ನಕಿನ್ನರಿ'ಗಳ ಮಾದರಿಯ ಕವನಗಳು ಹೊರಬಿದ್ದದ್ದು;

‘ಬಾಳುವಿ ಒಲಿವ್ಯಾಗ ಸುಟ್ಟು ಹಪ್ಪಳದ್ಹಾಂಗ’, ‘ಎಸ್ತ ಕನ್ನಡಿ ಹರಳು ಬೆಸ್ತುಕೂಡೀತೇನ?’ ‘ಮಾತಿಗೂ ಮೌನಕ್ಕೂ ಯಾತರ ಒಗೆತನ?’ ಎಂಬಂತಹ ಭಣಿತಿ ವೈಚಿತ್ರ್ಯಗಳು ಕಿಡಿಯಂತೆ ಹಾರಿದ್ದು. ಈ ಜಾನಪದ ಆವರಣ ಅವರ ಮೇಲೆ ಒಂದಲ್ಲ ಹತ್ತು ಬಗೆಯಿಂದ ಪರಿಣಾಮವನ್ನುಂಟುಮಾಡಿದ್ದನ್ನು ಅನೇಕಕಡೆ ನಾವು ಕಾಣಬಹುದು.

ಹೂವಿಗೆ ಹೋಗಿ ತಾವ
  ಗಲ್ಲಾ ತಿವಿ ತಾವ
ಬನ ಬನದಾಗ ಆಡಿ
  ಪಕ್ಕಾ ಹುಡಿ ಹುಡಿ;
ಹುಲ್ಲುಗಾವುಲದಾಗ
  ಹಳ್ಳೀ ಹುಡುಗೀ ಹಾಂಗ
ಹುಡದೀ ಹುಡದೀ ಭಾಳ
  ಆಟಕಿಲ್ಲ ತಾಳ— 8

ಎಂಬ ಅವರ ಪಾತರಗಿತ್ತಿ ಅವರ ರಸಿಕಭೃಂಗರೂಪದ ಮನಸ್ಸಿನ ಪ್ರತೀಕವಾಗಿದೆ ಎನ್ನಬಹುದು. ನಿಸರ್ಗದ ಹಾಗೂ ಲೋಕದ ವಿವರಪೂರ್ಣವಾದ ಅವರ ಅನುಭವ ವೈಶಾಲ್ಯದ ಗುಟ್ಟು ಮತ್ತು ನಕ್ಷತ್ರದಂತೆ ಮಿನುಗುವ ಚಾತುರ್ಯ, ಮಾಧುರ್ಯ, ಸೌಂದರ್ಯಗಳಿಂದೊಡಗೂಡಿದ ಅವರ ಮಾತಿನ ಮಟ್ಟು ಬಹುಮಟ್ಟಿಗೆ ಈ ಆವರಣ ಕೊಟ್ಟ ಸಂಸ್ಕಾರ. ದಾಸ–ಶರಣರ ವಚನವೈಖರಿಯ ಮಿರುಗು, ಸಾಧುಸಂತರ ಹೃದಯಪ್ರಸಾದದ ಬುರುಗು, ಕರುಳನ್ನು ಕರಗಿಸುವ ಕೌಟುಂಬಿಕನ ಕೊರಗು, ಹೃದಯವನ್ನು ಹಿಳಿಯುವ ದೇಶಪ್ರೇಮಿಯ ಮರುಗು, ಆಧ್ಯಾತ್ಮಿಕ ದರ್ಶನದ

ಆನಂದಲೀಲೆಯು ಬೆರಗು—ಬೇಂದ್ರೆಯವರ ಕವನಗಳಲ್ಲಿ ಕಂಡುಬರುವ ರೂಪ ಇಂಥ ನಿಸರ್ಗಸಹಜ ಆವರಣ ಕಲ್ಪಿಸಿ ಕೊಟ್ಟದ್ದು. ಛಂದಸ್ಸು, ಲಕ್ಷಣ, ಅಲಂಕಾರ, ಭಾವ, ರಸ ಗಳಲ್ಲಿ ಅವರು ತೋರುವ ನಿರಂಕುಶತೆ ಸರ್ವಾಂಗಸುಂದರಿ ಯಾದ ಕವಿತಾ ಕಾಮಿನಿಯನ್ನು ಹೃದಯಸ್ಪರ್ಶಿಯಾಗುವಂತೆ ರಚಿಸಲು ಈ 'ಬಂಧವಿರದೆ ಬಂಧುರ'ವಾದ, 'ಸ್ವಚ್ಛಂದ ಸುಂದರ'ವಾದ ಹಾಗೂ—

'ತಾಳ್ಯಾಕ ತಂತ್ಯಾಕ
ರಾಗದ ಚಿಂತ್ಯಾಕ
ಹೆಜ್ಜ್ಯಾಕ ಗೆಜ್ಜ್ಯಾಕ ಕುಣಿಯೋಣ ಬಾ' ೨

ಎಂಬಂತಿದ್ದ ಜೀವನ ಕ್ಷೇತ್ರದ ಪ್ರಭಾವವೇ ಕಾರಣ. ಆದರಿಂದಲೇ 'ಮೌನದಲ್ಲಿಯೂ ಕೂಡ ಮಾತಿನ ಧ್ವನಿಯಿರಲಿ' ಎಂದಂತೆ ಈ ನಿರಂಕುಶತೆಯಲ್ಲಿಯೇ ಸರ್ವಾರಾಧ್ಯ ಸಾಂಕುಶ ಕ್ರಮಬದ್ಧತೆ ಕಂಡುಬರುವಂತಾಗಿದೆ. ಅವರ ಕಾವ್ಯದ ಜನ ಪ್ರಿಯತೆಯ ಬ್ರಹ್ಮರಹಸ್ಯವೇ ಇದು.

III

ಛಂದೋ ವೈಶಿಷ್ಟ್ಯ

ಕೆಲವರೆಂದು ಛಂದೋಬಂಧವನ್ನು ಬಹಳ ಅಲ್ಪವೆನ್ನು ತ್ತಾರೆ. ಹಲವು ಕುಕವಿತಂಡಗಳು ಗುರುಲಘು ಎಣಿಸಿ ಸಾಲುಗಳನ್ನು ಅಕ್ಕರಿಸಿ ಅಚ್ಚುಮಾಡಿದ್ದೇ ಹಾಗೆನ್ನಲು ಕಾರಣ. ಚಿನ್ನದ ಕೊಡದಲ್ಲಿ ಸೆಗಣಿಯ ನೀರನ್ನು ತುಂಬಿ ಕೊಂಡು ಬಂದರೆ ಅದು ಕೊಡದ ತಪ್ಪೆನ್ನಿಸೀತೇ? ಸೆಗಣಿತುಂಬಿದ ಹತ್ತಾರು ಚಿನ್ನದ ಕೊಡಗಳನ್ನು

ಕಂಡು ಬೇಸತ್ತು ತಾಮ್ರದ ಕೊಡಗಳನ್ನು ಮಾಡಿಸಿ ಅವುಗಳಲ್ಲಿ ಲಿಂಬೆಯ ಪಾನಕವನ್ನು ತುಂಬಿಸಿದರೆ ಏನಾದೀತು? ಸುವರ್ಣಮಯ ಛಂದಃಪಾತ್ರದಲ್ಲಿ ಸತ್ಯವನ್ನಿಟ್ಟರೆ ಸುಂದರವಾದೀತು; ಅಸತ್ಯವನ್ನಿಟ್ಟರೆ ಕುರೂಪವಾದೀತು. ಕಾವ್ಯಸತ್ಯದ ಹಿರಣ್ಮಯ ಪಾತ್ರವೆಂದರೆ ಛಂದಸ್ಸು. ಪದ್ಯದ ಐಂದ್ರಜಾಲಿಕ ಶಕ್ತಿ ಇರುವುದೇ ಛಂದಸ್ಸಿನಲ್ಲಿ. ಛಂದಸ್ಸಿಲ್ಲದೆ ಮಂತ್ರಪ್ರಜ್ಞೆ ಪ್ರಕಟವಾಗಲಾರದು. ಛಂದ ಬದಲಾದರೆ ಅಂದವೆಂತು ಬದಲಾಗುವುದೆಂಬುದನ್ನು ಈ ಕೆಳಗಿನ ಹೋಲಿಕೆ ತೋರಿಸುತ್ತದೆ:

ದನಕರದ ಕಾಲ್‌ಧೂಳಿ
ಎದ್ದು ಸಂಜೆಯ ಹೂಳಿ
ಮುಗಿಲನ್ನು ಮುಟ್ಟಹುದು;
ಗೋಧೂಳಿ ಲಗ್ನದಲಿ
ಚಂದ್ರಿಕಾ ಚಂದ್ರಮರ
ಜೋಡು ಕೈಹಿಡಿದಿತ್ತು.
ಕಲಿಕಪ್ಪು ಎಲ್ಲಿಯೂ
ಇಲ್ಲ; ಒಂದೇ ಸಮನೆ
ಎಲ್ಲವೂ ನುಣುಪಿದೋ
ಹಾಲುಗಡಲಿನ ಸೀಮೆ
ಇದಕೆ ಚಂದ್ರ ಸ್ವಾಮಿ—
ಎಂಥ ಹಂದರದೀಡು
ಬೆಳುದಿಂಗಳನು ನೋಡು! (೧)

ದನ। ಕರದ ಕಾಲಿನಾ ಧೂಳಿ
ಸಂಜೆಯಾ ಹೂಳಿ
ಮುಗಿಲ ಮುಟ್ಯsದ
ಮುಗಿಲ ಮುಟ್ಯದ ।

ಗೋ। ಧೂಳಿಲಗ್ನಕಽ ಇತ್ತ
    ಕೈಯ ಹಿಡಿದಿತ್ತ
    ಕೈಯ ಹಿಡಿದಿತ್ತಽ
ಚಂ। ದ್ರಿಕೀ ಚಂದ್ರಮರ ಜೋಽಡಽ
ಬೆಳು। ದಿಂಗಳ ನೋಡಽ ॥
ಕಲಿ। ಕಪ್ಪು ಎಲ್ಲಿನೂ ಇಲ್ಲ
    ಬಂದೆ ಸವನೆಲ್ಲ
    ಎಲ್ಲನೂ ನುಣುಪಽ
    ಎಲ್ಲನೂ ನುಣುಪು।
ಇದು। ಹಾಲುಗಡಲಿನಾ ಸೀಮಿ
    ಚಂದ್ರಮನೆ ಸ್ವಾಮಿ
    ಚಂದ್ರಮನೆ ಸ್ವಾಽಮಿಽ
ಎ। ನೆಂಥ ಹಂದರದ ಈಽಡಽ
ಬೆಳು। ದಿಂಗಳ ನೋಡಽ ॥ (೨) 10

ಮೊದಲನೆಯದು ಝುಂಪೆರಗಳೆ; ಎರಡನೆಯದು ೨+೩+೩+೨ ಮಾತ್ರೆಗಳ ಗಣಗತಿಯ 'ಮೇಘರಗಳೆ'ಯ ಒಂದು ಪ್ರಭೇದ. ಒಂದನೆಯದು ವಿಮರ್ಶಕಕೃತ, ಎರಡನೆಯದು ಕವಿಬೇಂದ್ರೆ ಕೃತ—ಆ ಬೆಳುದಿಂಗಳನ್ನು ಓದಿ, ಈ ಬೆಳದಿಂಗುಳನ್ನು ಹಾಡಿ ರಸಿಕರು ನೋಡಲಿ!

ಬೇಂದ್ರೆಯವರ ಬೇರೆ ಬೇರೆ ಕವನಗಳನ್ನು ಪ್ರಸ್ತಾರ ಹಾಕಿನೋಡಿದರೆ ಹೊಸಗನ್ನಡದ ಷಟ್ಪದಿಜನ್ಯವಾದ ವಿವಿಧ ರಗಳೆಗಳ ಮನೋಹರವಾದ ಪ್ರಭೇದಗಳನ್ನು ಅಲ್ಲಿ ಗುರುತಿಸಬಹುದು. ಆದರೆ ಮಿಕ್ಕಡೆಯಲ್ಲಿ ಹೆಚ್ಚಾಗಿ ಕಂಡುಬರದೆ ಬೇಂದ್ರೆಯವರೇ ಹೆಚ್ಚಾಗಿ ಬಳಸಿದ ಮೇಘರಗಳೆಯ ಮೂಲವನ್ನು ಸಂಶೋಧಿಸಿದರೆ ಅದಕ್ಕೆ ಮರಾಠಿ

ಪವಾಡ ಹಾಗೂ ಹಲಸಂಗಿಲಾವಣಿಗಳ ಛಾಯೆ ಆಧಾರವಾಗಿರುವುದು ಗೊತ್ತಾಗುತ್ತದೆ. ಈ ಕೆಳಗಿನ ಹೋಲಿಕೆಯನ್ನು ನೋಡಿ:—

ಹಲಸಂಗಿಯ ಕರಿಹುಡುಗಿ:
ನೀ। ಬಾರ ಕರ್ರಾನ ಕರಿ। ಹುಡುಗಿ
ಕರೀ ಸೀರಿ। ಹುಡುಗಿ
ನವಿಲಿನ್ಹಂಗ। ನಡಿಗಿ। ನಡುತೆ ಸವನಾ ॥ (೧)
ಬೇಂದ್ರೆಯವರ ಮೇಘ:
ಆ। ಕೋಲಿನಲ್ಲಿ ಕುಣಿ। ಸುವಳು
ನವಿಲನ। ನ್ನಾಕೆ। ಸಂಜೆಯಲ್ಲಿ
ಕೈ। ತಟ್ಟ ಮಾಟ ಬಳೆ। ತಾಕ-
ಲಾಟಥಕ। ಥೈಯ। ಥಾಟನಲ್ಲಿ ॥ (೨) II

ಮೊದಲನೆಯದಕ್ಕೆ ತಾಳ ಹಾಕುವಾಗ ಸಾಂಗತ್ಯದಲ್ಲಿಯಂತೆ ಅಲ್ಲಲ್ಲಿಯ ಯತಿಸ್ಥಾನದಲ್ಲಿ ಬರೆದಕ್ಷರಗಳ ಗುರುತ್ವಲಘುತ್ವಗಳನ್ನು ತಾಳಾನುಗುಣವಾಗಿ ತಿದ್ದಿಕೊಂಡು ಉಚ್ಚರಿಸಿ ಓದಬೇಕಾಗುತ್ತದೆ; ಎರಡನೆಯ ಉದಾಹರಣೆಯಲ್ಲಿ ಅಂಥ ತಿದ್ದುಪಡಿಗಳನ್ನು ಬಾಯಲ್ಲಿ ಮಾಡಿಕೊಳ್ಳಬೇಕಾದ ಅಗತ್ಯವಿಲ್ಲ—ಇಷ್ಟೆ. ಹಿಂದೆಕೊಟ್ಟ ಬೆಳುದಿಂಗಳ ಗೀತದಲ್ಲಿ ಉಕ್ತ ತಿದ್ದುಪಾಟುಗಳನ್ನು ಅಲ್ಲಲ್ಲಿ ಮಾಡಿಕೊಳ್ಳಬೇಕಾಗುವುದು.

ಹಲಸಂಗಿಯ ಸುಂದರಿ:
ಚಂ। ದ್ರಾಣೀ ಚಂದನದ। ಗೊಂಬಿ ರತ್ನದಾ
ಕಂಬಿ ಆದಿಜಗ। ದಂಬಿಯಂತೆ ಜೌಲಾ ॥ (೧)
ಬೇಂದ್ರೆಯವರ ಯಕ್ಷಿ:
ಬಳ್ಳಿ ಮೈಯು ನನೆ। ಹಲ್ಲು ಕೆಂಪುತುಟಿ।

ಹಣ್ಣು ತೊಂಡೆಯಂತೆ ॥
ಸಣ್ಣ ನಡುವು ಚೆಲು। ಹುಲ್ಲೆಗಣ್ಣು ಕುಳಿ।
ನಾಭಿ ಸುಳಿಗಳಂತೆ ॥
ತನ। ತರನ। ತರನ। ತನ। ತರನ। ತರನ। ತನ ॥
ತರನ। ತರನ। ತನ। ನ ಅ ಅ ಅ ಅ ಅ। ಅ ಅ (೨) 12

ಅಡಿಗೆರೆ ಹಾಕಿದ ಮೊದಲಿನೆರಡು ಲಘುಗಳು ತಾಳದಲ್ಲಿ ಹುಸಿ. ಬೇಂದ್ರೆಯವರು ತಮ್ಮ ಸಾಲಿನಲ್ಲಿ ಕೆಲವೊಮ್ಮೆ ಅವನ್ನಿಡುತ್ತಾರೆ, ಕೆಲವೊಮ್ಮೆ ಬಿಡುತ್ತಾರೆ. ಕೊನೆಯ ನಕಾರವು ಮುಂದಿನ ಅಕಾರಗಳನ್ನೊಳಗೊಂಡು ತಾಳ ಪೂರ್ತಿಮಾಡುವ ಗುರು. ಈ ವೃಂದದ ಗತ್ತು, ಗಮಕ 'ತರಂ । ತೋನ್ನ । ನನ ॥ ತರಂ । ತೋನ್ನ । ನನ' ಎಂಬಂತೆ ಸಾಗುತ್ತದೆ. ಇದು ಬೇಂದ್ರೆಯವರ Pet ಪ್ರಿಯಚ್ಛಂದ ವೆನ್ನಬಹುದು. ಅವರ ಸಖೀ-ಗೀತದ ಛಂದಸ್ಸು ಸಾಂಗತ್ಯಕ್ಕೆ ಕೊನೆಯಲ್ಲಿ ಒಂದು ಗತ್ತನ್ನು ಹೆಚ್ಚು ಸೇರಿಸಿದ್ದು. ಇಂಥ ಅಲ್ಪ ಸ್ವಲ್ಪ ವ್ಯತ್ಯಾಸಗಳನ್ನು ತಾಳಕೆಡದಂತೆಯೇ ಮಾಡಿ ಹೊಸಗನ್ನಡ ಛಂದೋವಿತಾನದ ವಿಕಾಸಕ್ಕೆ ಬೇಂದ್ರೆಯವರು ಬಹಳಮಟ್ಟಿಗೆ ಕಾರಣರಾಗಿದ್ದಾರೆ.

IV

ನಾದಲೀಲೆ

ಪ್ರಸ್ತುತಕವಿಗಳು ನಾದಯೋಗಿಗಳು. ಅವರ ಮಾತಿನ ಮಥನದಿಂದ ನಾದದ ನವನೀತ ತಾನೇ ತಾನಾಗಿ ಉದಯಿಸುತ್ತದೆ. ಅವರ ಕವನದಲ್ಲಿಯ ನಾದತರಂಗಗಳ ನರ್ತನವನ್ನು ಅವರ ಬಾಯಿಂದಲೇ ಕೇಳೋಣ:

ಕಂಕಣ ಕಾಲುಂಗುರಕ ಮೆಲುಸಿರ-ಛಂದಕ
ಕುಣಿತಾನ ನಡೆಧಾಂಗ ಕಾಲಾsಗ
ನಂಬಿಸಿ ರಂಬಿಸಿ ಚುಂಬಿಸಿ ಎದೆಗೊಂಬಿ
ಬಿಂಬೀಸಿ ಎದೆಯೊಳಗ ಅಂಥಾಂsಗ ।
ಝುಣಣ ಮಿಡಿದಾವ ತಂತಿ; ಗೆಜ್ಜಿ ಪೈಜಣಕಟ್ಟ
ಮಾಯೆಯ ಮೈಯೊಳಗೆ ಬಂಧಾಂsಗ
ಜುಮ್ ಜುಮು ಝುಮು ಜುಮು ಗುಂಗುಣು
ದುಮು ದುಮು
ನಾದದ ನದಿಯೊಂದು ನಡೆಧಾಂಗ ॥
ನಲ್ಲ ನಲ್ಲೆಯುರಿರುಳು ಗಲ್ಲ ಗಲ್ಲಕೆ ಹಚ್ಚಿ
ಗುಣು ಗುಣು ಗುಲು ಗುಲು ನುಡಿಧಾಂಗ
ಆತನೀತನವಂತ ಯಾತನದ ಯಾತನೆಯು
ಯಾತ ಕಿರುಗುಟ್ಟೋದು ನಿಂಧಾಂಗ
ನಾನೀನ ನುಡಿನುಂಗಿ ತಾನೀನ ತಾನೆ ತಾ
ತಾನಾಗಿ ತನನsನ ಬಂಧಾಂಗ 13

ಗಾರುಡಿಗ ಕವಿ ಬೇಂದ್ರೆ ಹಿಡಿದ ಕಾವ್ಯದ ಮಾಯಾ ಕಿನ್ನರಿಯು ರಂಗು, ದಂಗು, ಗುಂಗುಗಳು ಅನಂತ. ಅವರ ಪ್ರತಿಭಾಬೀಜದ, ಬಿಂದು ತರಂಗಿಸುವ ನಾದದ ಲೀಲೆ ಇಂದ್ರಜಾಲದಿಂದ ಬಂದ ಸುಂದರಿಯರಂತಹ ಭಾವಗೀತೆಗಳನ್ನು ನಿರ್ಮಿಸಿದೆ, ಕುಣಿಸಿದೆ. ಆ ನಾದವೋ —

ಏನು ಏನು? ಜೇನು ಜೇನು? ಎನೆ ಗುಂ ಗುಂ ಗಾನ
ಓಂಕಾರದ ಶಂಖನಾದಕಿಂತ ಕಿಂಚಿದೂನ 14

ಎಂದು ಅವರ ನಾದವೇ ಸಾರುತ್ತಿದೆ. ಈ ಭಾವ ಅವರ ಸ್ವಭಾವ; ಈ ಭಕ್ತಿ ಅವರ ಶಕ್ತಿ:

ಗಾಳಿಯ ಹಾರಾಟ ಏರಾಟ ಚೀರಾಟ
ಭೋರಾಟ ಕುಣಿದಾಟ ತುಳಿದಾಟವು

ಎಳೆದಾಟ ತೂರಾಟ ಎಲೆಗಳ ಕಳೆವಾಟ
ಸುಟ್ಟುರೆಯು ಗಾಳಿಯು ಹುಡಿಯಾಟವು
ಛಂದೋಗತಿಯ ಚೆಂದ, ತಾಳ-ಲಯದಾನಂದ
ಸ್ವಚ್ಛಂದ ಬಂಧವ ಕಲಿಸಿದವು
ನಾಡ ಬಳಕೆಯ ನುಡಿಗೆ ಸೋತಿದ್ದ ಮನವನ್ನು
ಹಾಡಿನ ಮೋಡಿಗೆ ಒಲಿಸಿದವು.

ತಿಳಿಗನ್ನಡದ ಜೇನ್ನುಡಿಯಲ್ಲಿ ಇಷ್ಟೊಂದು ನಾದಮಾಧುರ್ಯವಿದೆ ಎಂಬುದನ್ನು ಬೇಂದ್ರೆಯವರಂತೆ ಇಂದು ಯಾರೂ ನಿದರ್ಶಿಸಲಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಲಕ್ಷ್ಮೀಶನನ್ನು ನಾದಲೋಲನೆಂದು ಕರೆದ ಅವರ ನಾದಲೋಲತೆ ಅವನಿಗಿಂತ ಯಾವ ಅಂಶದಲ್ಲೂ ಕಡಿಮೆಯಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದು. ಆದರೆ ಅವರ ಈ ನಾದಲೀಲೆಯಲ್ಲಿ ಪ್ರಾಸಕ್ಕಾಗಿ ಪ್ರಾಸವೆಂಬ ಯಾಂತ್ರಿಕತೆಯೆಲ್ಲೂ ಕಂಡುಬರದು. ಜಯದೇವನ ಗೀತಗೋವಿಂದ ಪಾಂಚಾಲೀ ಶೈಲಿಗೆ ಹೆಸರಾಗಿರುವಂತೆ ಬೇಂದ್ರೆಯವರ ಕವನಗಳಲ್ಲಿ ಕನ್ನಡ ಪಾಂಚಾಲಿತನವನ್ನು ಕಾಣಬಹುದು. ಅವರ ನಾದಬ್ರಹ್ಮ ಪದ+ಅರ್ಥ ಬ್ರಹ್ಮನೊಡನೆ ಅವಿಭಾಜ್ಯ ಸಂಬಂಧವುಳ್ಳವನು, ಭಾವಪೋಷಕ ನಾದ ಸಂಜೀವಕ, ಮರ್ತ್ಯಾರ್ಥವನ್ನು ಅಮೃತತ್ವಕ್ಕೇರಿಸುವ ಗರುಡ; ರಸಿಕರಲ್ಲಿರಬಹುದಾದ ವಾದಪ್ರವೃತ್ತಿಯನ್ನು ಮುಳುಗಿಸಿ ರಸಸಂವಾದಿಗಳಾಗುವಂತೆ ಪ್ರೇರಿಸಬಲ್ಲ ಮಹಾನಂದಸಾಗರದ ಹೆದ್ದೆರೆ. ಈ ನಾದ-ಪದಗಳ ಸಹಜಯೋಗವನ್ನು ಸಾಧಿಸಿದ ಕವಿಗೈ ಬೇಂದ್ರೆಯವರದು. ಅದೊಂದು **ಮಹಾಧ್ವನಿ,** ಪರಾ-ಪಶ್ಯಂತೀ—ಮಧ್ಯಮೆಗಳ ಧ್ವನಿ ಕೆಳಗಿನ ಕೆಲ ಸಾಲುಗಳಿದಕ್ಕೆ ಚಿಕ್ಕ ನಿದರ್ಶನ:

ಈ ಇದೂ ತುಂಬಿ ಆ ಅದೂ ತುಂಬಿ ಯಾವುದೂ ತುಂಬಿ ಇರದೇ
ತುಂಬಿ ಕಳೆದರೂ ತುಂಬಿ ಉಳಿದರೂ ತುಂಬಿ ತುಂಬಿ ಬರದೇ.
ಜನನಮರಣದಲಿ ಅಮೃತನೆಂದಿಗೂ ಅಹುದು ತುಂಬಿ ತುಂಬಿ
ಮೈದುಂಬಿ ತುಂಬಿ ಹಲಜೀವ, ದೇವ ಜಗದುಂಬೆ ತುಂಬಿ ತುಂಬಿ
... ...
ಗುರುವಿಂದ ತುಂಬಿ ಅರವಿಂದ ತುಂಬಿ ತುಂಬುರುವಿನಿಂದ ತುಂಬಿ
ತಾಯೆಂದು ತುಂಬಿ ತಂದೆಂದು ತುಂಬಿ ಕಂದನ್ನ ತನ್ನ ತುಂಬಿ
ಅಂಬಿಕೆಯು ತುಂಬಿ ನಂಬಿಕೆಯು ತುಂಬಿ ಕಣ್ಣೊಂಬೆ ರಂಭೆ ತುಂಬಿ
ಶ್ರೀ ಮಾತೆ ತುಂಬಿ ಈ ಮಾತೆ ತುಂಬಿ ತಂತಾನೆ ಬಂತು ತುಂಬಿ. 16

ಈ ತುಂಬಿಬಂದ ತುಂಬುಗೊರಲಿನ ತಿಳಿನಾಡಿನ ನಲ್ಮೆನಲಿಗೆ ವ್ಯಾಖ್ಯೆ ಬರೆಯುವುದು ಅಂದಗೇಡಿತನದ ಕೆಲಸವೇ ಸೈ. ಈ ತುಂಬುಧ್ವನಿ ತನಗೆ ತಾನೇ ಸೂತ್ರ, ತನಗೆ ತಾನೇ ಭಾಷ್ಯ.

ಪಟ್ಟ ಪಾಡೆಲ್ಲವು ಹುಟ್ಟು ಹಾಡಾಗುತ
ಹೊಸವಾಗಿ ರಸವಾಗಿ ಹರಿಯುತಿವೆ 17

ಎಂಬ ಅವರ ವ್ಯಾಖ್ಯೆಯೇ ವಾಖ್ಯೆ—ವ್ಯಾಖ್ಯೆ ಬೇಕಾದವರಿಗೆ. ಸಂಗೀತ ಹೇಳುವುದು ಮೂಕಭಾವ; ಆದರದಕ್ಕಿಲ್ಲಿ ಸಾಹಿತ್ಯದ ಬಾಯಿದೊರೆತು ರಸಗಂಗಾವತರಣವಾಗಿರುವುದರಿಂದ Music, is the language of the soul—ಸಂಗೀತವು ಜೀವದಮಾತು ಎಂಬ ನುಡಿ ಸಾರ್ಥಕವಾಗುವಂತಾಗಿದೆ. ಅನುಭವ—ಅನುಭಾವಗಳ ಬಲ್ಮೆಯಿರುವುದರಿಂದ ಕವಿ ಅಣುಭಾವಮುಕ್ತ ಮಹಾನುಭಾವ ದೃಷ್ಟಿಯನ್ನು ಪಡೆದು ಇಂತು ರಸವನ್ನು ನಾದದಿಂದ ಧ್ವನಿಸಲು ಶಕ್ತರಾಗಿದ್ದಾರೆ. ಇದೇ ಅವರ ಕಾವ್ಯಗಾಯತ್ರಿಯ ಪ್ರಣವತಂತ್ರ, ಸಾಮೋಪಾಯ. ಈ ನಾದಸಮುದ್ರದ ಸಾಮುದ್ರಿಕವನ್ನು ಗಂಗಾವತರಣ, ಬೆಳುದಿಂಗಳ ನೋಡs,

ಶ್ರಾವಣ, ಬೆಳಗು, ಮಾಯಾಕಿನ್ನರಿ, ತುಂಬಿಬಂದಿತ್ತು, ಗಾಯತ್ರೀಸೂಕ್ತ, ಸಚ್ಚಿದಾನಂದ ಮುಂತಾದ ಕವನಗಳಲ್ಲಿ ಗುರುತಿಸಬಹುದು.

V

ಚತುರೋಕ್ತಿ ವೈಭವ

ಚಮತ್ಕಾರವು ರಸಸಾರವೆಂಬ ಗಾದೆಗೆ ಸತ್ಯತೆಯಿದ್ದರೆ ಅದನ್ನು ಬೇಂದ್ರೆಯವರ ಹಲವು ಕವನಗಳಲ್ಲಿ ಕಾಣಬಹುದು. ಮಾಧುರ್ಯವನ್ನು ಸೂಸುವ ಚಾತುರ್ಯ, ನಗೆಗಾರಿಕೆ, ನಿಶಿತಮತಿಯನ್ನು ಹೊಳೆಯಿಸುವ ಚಪಲತೆ ಬೇಂದ್ರೆಯವರಲ್ಲಿ ಹುಟ್ಟುಗುಣ. ಅಂಥ

ಚಕ ಚಕ ಚಂಚಲ
ಮಿಂಚಿನ ಗೊಂಚಲ
ಚಕಮಕಿ ಚಲಮಲ 18

ಎಂಬಂಥ ಮಿಂಚುಮಾತಿನ ಸಂಚನ್ನು ನೋಡೋಣ:

ಕಬ್ಬಿನ ಗಣೆಡೊಂಕು ಅದರ ಹಾಲದು ಡೊಂಕೆ
ರಸಿಕಾ ಪೇಳೊ
ಹುಬ್ಬಿನ ಗೆರೆ ಡೊಂಕು, ಕಣ್ಣ ನೋಟವು ಡೊಂಕೆ
ರಸಿಕಾ ಪೇಳೊ
ಬಿಲ್ಲ ಕಂಬಿಯು ಡೊಂಕು, ಬಿಟ್ಟ ಬಾಣವು ಡೊಂಕೆ
ರಸಿಕಾ ಪೇಳೊ
ಹಲ್ಲಸಾಲದು ಡೊಂಕು, ಬಿದ್ದ ಕಿರಣವು ಡೊಂಕೆ
ರಸಿಕಾ ಪೇಳೊ
ಚೆಂಬಾಳೆ ಮೈ ಡೊಂಕು, ಅದರ ತಿರುಳದು ಡೊಂಕೆ
ರಸಿಕಾ ಪೇಳೊ
ಬಿಂಬಾಧರವು ಡೊಂಕು, ಚುಂಬನವದು ಡೊಂಕೆ
ರಸಿಕಾ ಪೇಳೊ

ಬಿದಿಗೆ ಚಂದ್ರಮ ಡೊಂಕು, ಬೆಳದಿಂಗಳದು ಡೊಂಕೆ
ರಸಿಕಾ ಪೇಳೊ
ವಿಧಿಯಿತ್ತ ಕುಲಡೊಂಕು, ನನ್ನ ಪ್ರೀತಿಯು ಡೊಂಕೆ
ರಸಿಕಾ ಪೇಳೊ (೧) 19

ಇದೊಂದು ಮಾದರಿ ಸಾಕು. ಆದರೂ ಅತ್ತಿತ್ತ ಕಣ್ಣುಗಳನ್ನು ಹೊರಳಿಸಿದರೆ ಇನ್ನೂ ಹಲವಾರು ಸ್ವಯಂಸ್ಪಷ್ಟ ಉದಾಹರಣೆಗಳು ದೊರಕುತ್ತವೆ.

ಹಾಸಿಗಿ ಮಗ ಮಗ, ಮಂಚಕ ಝಗ ಝಗ
ನನ್ನ ಎದೆ ಮಾತ್ರ ಧಗ ಧಗ ಉರಿದೀತು
ಹೊತ್ತಿತ ಬೆಂಕಿ ಹೊರಜಗಾ (೨) 20

ನನ್ನ ನಾನು ಮರೆಯುವಂತೆ
ಮದ್ಯವನ್ನು ಕುಡಿದೆನು
ತನ್ನ ತಾನು ಅರಿಯುವಂಥ
ವಿದ್ಯೆಯನ್ನು ಹಿಡಿದೆನು. (೩) 21

ಒಳ ಹೊರಗು ಬೆಳಕು ನಾನಿರಲು ಯಾಕನಿನ ಹಣತಿ
ಬಾರ ನನ ಗೆಣತಿ। (೪) 22

ಕುರುಡಿರಲಿ ಮೆಳ್ಳಿರಲಿ ಕಪ್ಪು ಕನ್ನಡಕವಿರೆ
ನಯನಗಳನೇನು ಬಣ್ಣಿಸಲಿ ಮಣ್ಣು? (೫)

[ಭೂಮಿಗೆ] ನೀ ತಿರುಗುತ್ತಿದ್ದರೇನು
ನೀನಿಲ್ಲದೆಡೆಯದಿಲ್ಲ
ತಾ ತಪ್ಪಿ ನಡೆದರೇನು
ನಿಲೆ ಬೇರೆ ಕಾಲಿಗಿಲ್ಲ! (೬)

[ಹೃದಯ ಸಮುದ್ರ]
ಇದು ಉಪ್ಪುನೀರ ಕಡಲಲ್ಲೊ ನಮ್ಮ
ಒಡಲಲ್ಲು ಇದರ ನೆಲೆಯು
ಕಂಡವರಿಗಲ್ಲೊ ಕಂಡವರಿಗಷ್ಟೆ
ತಿಳಿದಽದ ಇದರ ಬೆಲೆಯು. (೭) 23

ನಗುವಿರಲಿ
ಅಳುತಿರಲಿ
ಎರಡನ್ನು ನಂಬಿ
ನಗೆ ನಂಜು
ಅಳು ಮಂಜು
ಇದ್ದೀತು ಎಂಬಿ. (೮) 24

ಮಾಟವಿಲ್ಲದ ಆಟ, ಏನಾಟ? ಎಳೆದಾಟ!
ಮಾಯಾ ಸಂಸಾರಕ್ಕೆ ಮಾಯುಬೇಕು (೯) 25

ರಂಗು ಇಹುದು, ರೂಪವಿಹುದು
ಗಂಧ ಒಳ್ಳಿತಿಲ್ಲವು;
ನಯುವು, ನುಣುಪು, ಇದ್ದು ಏನು?
ವ್ಯರ್ಥವಾಯಿತೆಲ್ಲವು! (೧೦) 26

ಚಮತ್ಕಾರವು ಮಾತಿಗೊಂದು ಗೀತ, ಊಟಕ್ಕೊಂದು ಉಪ್ಪಿನ ಕಾಯಿ; ಆದರಲ್ಲಿ ಅನಿರೀಕ್ಷಿತ ಅರ್ಥದ ಆವಿರ್ಭಾವವುಂಟು. ಅದು ಪ್ರತಿಭೆಯ ಹೂ, ಸಂಭಾಷಣೆಗೊಂದು ಒಗ್ಗರಣೆ, ರಸದ ಹಬ್ಬದಲ್ಲಿ ಪಟಾಕಿಯುತ್ಸವ, ಕಾವ್ಯ ಮಂದಾರದಲ್ಲಿ ಕುಳಿತ ಬಣ್ಣ ಬಣ್ಣದ ಪಾತರಗಿತ್ತಿ ಅಥವಾ ಚಿಟ್ಟೆ ಎಂದು ಮುಂತಾಗಿ ಹೇಳುವುದುಂಟು. ರಸಿಕರು ತಮ ತಮಗೆ ಬೇಕಾದ ಹೆಸರಿಟ್ಟು ಅದನ್ನು ಮುದ್ದಿಸಿದ್ದಂತೂ ಸ್ಪಷ್ಟ. ಬೇಂದ್ರೆಯವರ ಸಂವಾದಚಾತುರ್ಯವು ಜನಪ್ರಿಯವಾಗಲು ಇಂಥ ಚಮತ್ಕಾರದ ಹೂಬಾಣಗಳು ಪದೇ ಪದೇ ಅವರ ಬಾಯಿಂದ ಹೊರಡುವುದೇ ಕಾರಣ. ಅನ್ಯೋನ್ಯಾಶ್ರಯ, ಒಗಟು ಮುಂತಾದ ಬಗೆಗಳನ್ನೂ ನಾವು ಅವರ ಮಾತಿನಲ್ಲಿ ನೋಡಬಹುದು. ಈ ರಸವಿನೋದ ಬೇಂದ್ರೆಯವರ ಹುಟ್ಟು ರಸಿಕತೆಗೆ ಸಾಕ್ಷಿ.

VI
ವಿಡಂಬನ ಸಾಮರ್ಥ್ಯ

ಬೇಂದ್ರೆಯವರ ನಗೆಗಾರಿಕೆಯು ವ್ಯಂಗ್ಯಮುಖ ಕಣ್ಣನ್ನು ಕೋರಯಿಸುವಂಥದು. ಅಲ್ಲಿ ಅವರ ನಾಲಿಗೆ ಈರಲಗಿನ ಚೂರಿ. ಹೊಟ್ಟೆಯಲ್ಲಿ ಹೊಕ್ಕು ಬೆನ್ನಲ್ಲಿ ಮೂಡುವಂಥ ವಕ್ರಪುಂಖ ಬಾಣವದು. ಹರಿಹರಹಿರಣ್ಯಗರ್ಭರನ್ನೂ ಲೆಕ್ಕಿಸದ ಸರ್ಪದರ್ಪ ಅದಕ್ಕಿದೆ. ಆ ಇರ್ಕೊರ್ಕ್ಕಿನಿಂದ ಹಿಡಿಯುವ ಗಂಡಭೇರುಂಡದ ಕುಕ್ಕು ಸತ್ತವರನ್ನು ಎಬ್ಬಿಸೀತು, ಜೀವವಿದ್ದವರನ್ನು ಸಾಯಿಸೀತು. ಅದು ಅವರ ಸುದರ್ಶನ ಚಕ್ರ! Sarcasm is a cardboard sword that kills with laughter—ಚುಚ್ಚುವ ಮಾತೆಂಬುದು ನಗುನಗುತ್ತ ಕೊಲ್ಲುವ ರಟ್ಟಿನ ಕತ್ತಿ ಎನ್ನುತ್ತಾರೆ; ನೋಡಲು ಬೆಣ್ಣೆಯ ಮುದ್ದೆ, ಹೊಡೆತವೋ ಕವಣೆಯ ಕಲ್ಲಿನದು! ಒಮ್ಮೆ ಉಕ್ಕಿನ ಕತ್ತಿಯೂ ಆದೀತು! 'ಗರಿ'ಯಲ್ಲಿ ಬಂದ ಯುದ್ಧವಿಡಂಬನೆಯನ್ನವಲೋಕಿಸಿ:

ನಿಂದಿಹರಿದೊ ಇಗೊ!
ಎಕ್ಕಡ ಮೆಟ್ಟಿದ ಎಕ್ಕಲ ಬಂಟರು
ಉಕ್ಕಡ ಗಾತ್ರದ ಉಕ್ಕಡದವರು
ಕಕ್ಕಡ ಹೊತ್ತಿಸಿ ಕಣ್ಣುಗಳಲ್ಲಿ
ಮಾಡಿಸೆ ಕೆನ್ನೀರ್ ಜಳಕವನು
ಸುರಿಸೆ ರುಂಡದ ಹೂವುಗಳ
ಹಾಕಲು ಮದ್ದಿನ ಧೂಪವನು
ಬಾರಿಸೆ ಗುಂಡಿನ ಗಂಟೆಗಳ
ಬಂದಿತು ಬಂದಿತು ನೈವೇದ್ಯ
ನೀತಿಯು ಭೂತವೆ ಹೊರಡಿಲ್ಲಿಂದ

ಪಯೆಯು ದೆವ್ವವೆ ನೀ ಹೊರಡು
... ...
ಬಲಗಾಲ್ ಬುಡದಿಂ ಬಿಡುಗಡೆ ಬಿಡಿಸಲು
ನರಬಲಿಯೇ ಬೇಕು!
... ...
“ಮುಕ್ಕಣ್ಣನ ಆ ಮೂರು ಕಣ್ಣುಗಳು
ಕುರುಡೇ ಕುರುಡೇ?
ಭೂ ಶ್ರೀಪತಿಯಾ ನಾಲ್ಕು ಕೈಗಳು
ಮೊಂಡೇ ಮೊಂಡೇ?
ವೇದವುಸುರಿದನ ನಾಲ್ಕು ಮುಖಗಳು
ಮೂಕೇ ಮೂಕೇ?
ಅಮರರೆಂಬವರು ಕೊಳೆಯುದ ಹೆಣಗಳೊ
ಮುಚ್ಚದ ಕಣ್ಗಳು ಮುಚ್ಚಿದ ಕಣ್ಗಳೊ?”
ಏನಿದು ಏನಿದು ಏನನ್ಯಾಯ?
ಶಾಂತಂ ಪಾಪಂ ಒಳಿತೋ ಒಳಿತು
ದೇವಿಯ ಪೂಜೆಗೆ ಹೆಸರಿಡಬೇಕೆ?
... ...
ಇದುವೇ ಕಾಳಿಯ ಪೂಜೆಯು ಶುದ್ಧ
ಇದಕ್ಕೆ ಹುಂಬರು ಎಂಬರು ಯುದ್ಧ.
ಭೂಮಿತಾಯಿಯೆ ಜ್ವಾಲಾಮುಖದಿಂದೂದು
ಶಂಖವನ್ನು!
ನಿಲ್ಲಲಿ ನಟರಾಜನ ನಾಟ್ಯ
ಭಂಗ ಪಡೆಯಲಿ ಬ್ರಹ್ಮ ಸಮಾಧಿ
ಹೋಗಲಿ ಹಾಲಿನ ಕಡಲಲಿ ಮಲಗಿದ
ದೇವನ ನಿದ್ದೆಯು ಹಾಳಾಗಿ!
ನೋಡಲಿ ನೋಡಲಿ ನೋಡಲಿ ಅವರು
ಮೂವರು ಕೂಡಿ, ರಚಿಸಿದ ಮೂರಾಬಟ್ಟೆಯ
ನಾಟಕವ!

ಈ ರಸಾವೇಶ ಸೌಂದರ್ಯದ ಓಜೋಗತಿಯು ಕಂಡವರಿಗಷ್ಟೇ–ಕಂಡವರಿಗಲ್ಲ–ಕಾಣಿಸುವುದು. ಮೈದುಂಬಿ ಕುಣಿವ ಪಾತ್ರಿಯಂತೆ, ಕಾಳಿಂಗನ ಕಸರತ್ತಿನಂತೆ, ಸಹರದ ಜಂಝಾವಾತದಂತೆ, ಗುಡುಗು-ಸಿಡಿಲು-ಮಿಂಚು-ಮಳೆಗಳ ಉತ್ಪಾತದಂತೆ ಅವರ ಈ ಮಾರಣರೂಪಕಮಾಲೆಯು ಪ್ರೇತ ನೃತ್ಯದ ತಾಂಡವ ಲೀಲೆ ಕಲ್ಲೆದೆಯಲ್ಲೂ ಝಲ್ಲೆನಿಸದೆ? ರಣಭೀಷಣನ ಭೀಷಣ ಮುಸಕದಂತೆ ಸುಡುರಸದ ರಂಗತರಂಗಗಳಲ್ಲಿ ಮಾಡುವ ಗರ್ಜಿತ-ತರ್ಜಿತಗಳಿಂದ ನೆತ್ತರಹೇಡಿಗೆ ಗರ್ಭಪಾತವಾಗದೆ ಹೋಗದು. 'ಕೆಟ್ಟೋಡಿದರ್ ಕೆಲಕೆಲರ್ ಗಜರಥಂಗಳಂ' ಎಂಬಂತೆ ಯುದ್ಧವೆಂಬ ಹಿಂಸಾಪೂಜೆಗೆ ಹೇಸಿ ಸಾತ್ವಿಕ ಜೀವ ಓಡಿಹೋಗದಿರದು. ಇದು ಬೇಂದ್ರೆಯವರ ರಸವತಿಯಾದ ಸರಸತಿಯ ಕಾಳಿಕಾವತಾರ. ಈ ರುದ್ರಶೈಲಿಯಲ್ಲಿಯೂ ಬೇಂದ್ರೆ ಎತ್ತಿದ ಕೈ. ಕೆಳಗಿನ ಚಿನ್ನದ ಚೂರಿಯ ಇರಿತವನ್ನು ನೋಡಿ:

ಬಂಗಾರ ಬಂಗಾರ
ಉಳ್ಳವರ ಸಿಂಗಾರ
ಬಡವರನು ಸುಟ್ಟು ಹಣೆಗಿಟ್ಟ ಅಂಗಾರ! 28

ಇದೇ ಬಂಗಾರಯ್ಯ (ಹಿರಣ್ಯಕಶಿಪು=ಸ್ವರ್ಣ ಭಕ್ಷಕ) ಅವರ 'ಕುರುಡು ಕಾಂಚಾಣ'ದಲ್ಲಿ ಹೇಗಿದ್ದಾನೆ ಗೊತ್ತೇ?

ಬಾಣಂತಿಯೆಲುಬ ಸಾ-
ಬಾಣದ ಬಿಳುಪಿನ
ಕಾಣದ ಕಿರುಗೆಜ್ಜೆ ಕಾಲಾಗ ಇತ್ತೋ;
ಸಣ್ಣ ಕಂದಮ್ಮಗಳ
ಕಣ್ಣೀನ ಕವಡಿಯ

ತಣ್ಣನ್ನ ಜೋಮಾಲೆ ಕೊರಳೊಳಗಿತ್ತೋ;
ಬಡವರ ಒಡಲಿನ
ಬಡಬಾನಲದಲ್ಲಿ
ಸುಡುಸುಡು ಪಂಜು ಕೈಯೊಳಗಿತ್ತೋ! 29

ಈ ಭೀಕರ ಬೀಭತ್ಸ ಸ್ವರೂಪದ ಹಣದಿನಿಯಾದ ಬಂಡವಾಳಶಾಹಿಯ ಕೃಪಣಾಗ್ರೇಸರ ಚಕ್ರವರ್ತಿಯ ಕ್ರೂರ ಶೋಷಕವೃತ್ತಿಯ ಕೊನೆಯಾದರೋ—

ಹ್ಯಾಂಗಾರೆ ಕುಣಿಕುಣಿದು
ಮಂಗಾಟ ನಡೆದಾಗ
ಅಂಗಾತ ಬಿತ್ತೋ, ಹೆಗಲಲಿ ಎತ್ತೋ!

ಧನದ ದೌಲತ್ತಿನಿಂದ ಕುರುಡಾದ ಕಾಳೆದೆಯ ಕರ್ಕಶ ಪಿಂಡವನ್ನು ತಾತ್ಸಾರಿಸಿದ ಮೂದಲಿಕೆಯ ಮಾತಿನ ಮರ್ಮಾಘಾತವನ್ನಿಲ್ಲಿ ಮುಟ್ಟಿನೋಡಿಕೊಳ್ಳಬೇಕೆಂಬ ಹಾಗಿದೆ. ಈ ಶೂಲಶೈಲಿ ಹೊಸಗನ್ನಡದಲ್ಲಿ ದುರ್ಲಭ. ಕಣ್ಣಿಗೆ ಕಟ್ಟಿದಂತೆ ಧನಪಿಶಾಚಿಯು ಸಿಂಗಾರದ ಸೊಡ್ಡಿಲ್ಲಿ ಎದೆಚಾಚಿ ನಿಂತಿದೆ, ಕೊನೆಗೆ ಮುಸುಡಡಿಯಾಗಿ ಬಿದ್ದಿದೆ!

ಬೇಂದ್ರೆಯವರ ಚುಚ್ಚುಮದ್ದಿನ ಖಾರಕ್ಕೆ ಹತ್ತಿರವಾದ ಅವರ ಬಿಚ್ಚುಮದ್ದನ್ನೆತ್ತಿಕೊಂಡರೆ ಇನ್ನೂ ಹೆಚ್ಚು ಉದಾಹರಣೆಗಳು ದೊರಕುತ್ತವೆ:

ಹಲ ಕೆಲವು ಹುಳುಗಳೆನ್ನಿ!
ಹಲಕೆಲವು ಕುರುಡು ಕುನ್ನಿ!
ಕೆಲ ಕೆಲವು ಹುಚ್ಚು ಕುರಿ!
ಕೆಲವು ಹೊಸ ಹೊಚ್ಚ ಮರಿ!
ಗಂಡುತನಕೇಸೊ ಸೊನ್ನಿ!
ಲೆಕ್ಕಕ್ಕೆ
ಮೂವತ್ತು ಮೂರು ಕೋಟಿ!! (೧) 30

ಧರ್ಮಕೆ 'ಧರ್ಮ' ಎನಬೇಡಾ
    ಕರ್ಮವು ಇದು ನೋಡಾ;
ಹಗರಣದೊಳಗಿನ ಸೋಗುಗಳು
    ಅವುಗಳ ಕೂಗುಗಳು.
... ...

ವೇದಾಂತಿಯ ಮುಖಮುದ್ರೆಯ ನೋಡಿ
    ಕನಿಕರ ಹುಟ್ಟುವುದು,
ಹತ್ತವತಾರದ ಹೇಡಿತನಕ್ಕೆ
    ಮನ ಗೊಣಗುಟ್ಟುವುದು.
ಗಾಳಿಗೆ ಗಾಳಿಯು ಬಯಲಿಗೆ ಬಯಲು
    ತಲೆ ರಣಗುಟ್ಟುವುದು. (೨) 31

ಕಲ್ಕಿ ದೇವನು ಬಂದ
ಉಳ್ಕಿ ದೇವರ ತಂದ
ಸಲ್ಕಿಗುದ್ದಲಿಯಿಂದ ತೋಡಿದನಲ್ಲಾ
    ತೋಡಿದನಲ್ಲಾ !
ಎಲ್ಲಾ ದೇವರು ಬಂದು
ತಲ್ಲಣಗೊಂಡರು
ಇಲ್ಲಿಯವರ ಕಾಟ ಇಲ್ಲ್ಯಳಿಯಿತಲ್ಲಾ
    ಇಲ್ಲ್ಯಳಿಯಿತಲ್ಲಾ! (೩) 32

ಅನ್ನವನ್ನು ಚಿನ್ನಗೊಳಿಸಿ
ಉಣ್ಣ ಬರದ ಹಾಗೆ ಮಾಡಿ;
ಮನದ ಮನೆಗೆ ಮುಳ್ಳ ಚುಚ್ಚಿ—
ಬೆಳಕಿನೊಂದು ಕಣ್ಣು ಕಳೆದು;
ಗಾಳಿ ಬಟ್ಟೆಯನ್ನು ಕಟ್ಟಿ
ಪ್ರಾಣ ನಿತ್ರಾಣಗೈದು;
ಎಲ್ಲ ದೇವರನ್ನು ಜೈಯ್ದು
ಸ್ವರ್ಗವಾಸಿಗಳನು ಮಾಡಿ;

ಪಾತಾಳದಿಂದ ನರಕ-
ವನ್ನು ಎತ್ತಿ ಉದ್ಧರಿಸಿ;
ಶಾಂತಿ ಪಾಠ ಹೇಳುವವರೆ
ಅತ್ತ ಇತ್ತ ಸುತ್ತು ಮುತ್ತು. (೪) 33
ದುಂಡು ಮೋಜಿನ ಸುತ್ತ
ದುಂಡು ದುಂಡು ಮಂದಿ,
ದುಂಡು ದುಂಡು ಮಂದಿಗೆ
ಬಂಡೀಗಾಲೀ ಹೊಟ್ಟಿ,
ಬಂಡೀ ಗಾಲೀ ಹೊಟ್ಟೆಗೆ
ಗುಂಡು ಕಲ್ಲ ತಲೆಯು,
ಗುಂಡು ಕಲ್ಲs ತಲೆಗೆ
ಸೊನ್ನೆ ಸುತ್ತಿದ ಮಿದುಳು,
ಸೊನ್ನೆ ಸುತ್ತಿದ ಮಿದುಳಿಗೆ
ಪೂಜಿ ಪೂಜಿ ಫಲವು,
ಪೂಜಿ ಪೂಜಿ ಫಲದೊಳಗೆ
ಚಕ್ರಗೋಷ್ಠಿ ಗೊರಟ,
ಚಕ್ರಗೋಷ್ಠಿ ಗೊರಟಕ್ಕೆ
ವಕ್ರ ಶನೀ ನೋಟ,
ಬೆಳ್ಳನ್ನವರಿಗಾಟ—
ಕಪ್ಪನ್ನವರಿಗೆ ಕಾಟ—
ತಂತಮ್ಮನೆಗೋಟ—
ಮುದುಕನದಿದು ಬ್ಯಾಟ. (೫) 34

ಈ ಐದನೆಯ ಉದಾಹರಣೆಯಲ್ಲಿ ನಿರಾಶೆಯನ್ನು ನಗೆಯಲ್ಲಿ ತೇಲಿಸಿ ಹೇಳಿಕೊಳ್ಳಬಲ್ಲ—

ಶೂನ್ಯಮಿದಂ ಶೂನ್ಯಮದಃ
ಶೂನ್ಯಾತ್ ಶೂನ್ಯಮುದಚ್ಯತೇ ।
ಶೂನ್ಯಸ್ಯ ಶೂನ್ಯಮಾದಾಯ
ಶೂನ್ಯಮೇವಾವಶಿಷ್ಯತೇ ॥

ಎಂಬಂತಹ ಶೈಲಿಯ Sense of Humour ಹಾಸ್ಯಗಾರಿಕೆ ಬೇಂದ್ರೆಯವರ ವೈಶಿಷ್ಟ್ಯ. ದು:ಖವನ್ನು ಸಹ್ಯಮಾಡಿಕೊಳ್ಳಬಲ್ಲ ರಸಿಕತೆ ವಿಡಂಬನೆಯ ಬಳ್ಳಿ ಬಿಡುವ ಮಲ್ಲಿಗೆ ಹೂ. ಹಾಸ್ಯವಟಪತ್ರದಲ್ಲಿ ಮಲಗಿದ ಹಾಲುಹಸುಳೆ ಹರಿ. ಮಿಕ್ಕ ಉದಾಹರಣೆಗಳಲ್ಲಿ ಸರಿಯಾದ ಬೈಗುಳ, ಶಾಪ, ಮೂದಲಿಕೆ, ಅಣಕ, ಕಾಕು, ಕೊಂಡಿ, ವಕ್ರೋಕ್ತಿಗಳು ಕಾಯ್ದ ಕಬ್ಬಿಣದ ಸಲಾಕೆಯಂತೆ ಬರೆಗೊಡ ಹೊರಟರೆ ಇದರಲ್ಲಿ ಬೇಂದ್ರೆ—

‘ನಲ್ಲ! ನಿನ್ನ ಲಲ್ಲೆವಾತು
ಮೀಸೆ ಕುಡಿಯಲಲ್ಲೆ ಹೂತು
ಕುಣಿದು ಮಣಿದು ಬಂತು ಹೋತು
ನಲ್ಲ ನಿನ್ನ ಲಲ್ಲೆವಾತು!’ 35

ಎಂಬಂತಹ ಶೈಲಿಯಲ್ಲಿ ರಾರಾಜಿಸುತ್ತದೆ.

ಬತ್ತಿತು ಅನ್ನ ಹೊತ್ತಿತು ಚಿನ್ನ
ಚಂಚಲ ಲಕ್ಷ್ಮಿಯು ಕಟಾಕ್ಷದನ್ನ
ಹುಟ್ಟದ ಕೂಡಲೆ ಹಾರಿತೊ ಅಣ್ಣ.
ಮಾನವ ಮೂರ್ತಿ ಮತಿ ಸಂಪನ್ನ
ಹೊಟ್ಟೆಗೆ ಹಾಕಿದ ಚಿನ್ನದ ಕನ್ನ
ಹುಟ್ಟತಲ್ಲಿಯೇ ಹೊಟ್ಟೆಯ ಬನ್ನ
... ...
ಜೀವದ ಗತಿ ಹತಿಯಿಲ್ಲದ ಮೃತಿಯೋ?
ಅನ್ನs ಅನ್ನs! ಕಡಿ ಹೊನ್ನನ್ನ. (೬) 36
ನಾಯಿ ಮಕ್ಕಳು ನಾವು—ಅರಸುಮಕ್ಕಳು ತಾವು
ನಾವು ನಿಷ್ಪಾಪರೆಂದಂದು ಕೋಂಡವರಾರು? (೭) 37
ಜೀವ ಜೀವದ ಉಣಿಸೆ? ಏನು ಜೀವನವೊ?
ಬಾಳೆದೆಗೆ ಶೂಲವಿರಲೇನು ಕಾರಣವೊ?

ಬೇರೆ ಹಾದಿಯೆ ಇಲ್ಲೆ? ಇದು ಯಾವ ಭಾವ
ಇದು ಏನು ದೇವ? ಓ ದೇವ ಮಾದೇವ? (೮) 38
ಯಜ್ಞಕುಂಡದ ಹಾಗೆ ಹಗಲಿರುಳು ಹೊತ್ತುತಿಹ
ತವಸಿಗಳ ಎದೆಯ ವೇದಿಕೆಯ ತುಳಿದು,
ಜ್ಞಾನ ಶಕ್ತಿಗೆ ಇಟ್ಟ ನಿತ್ಯ ನಂದಾದೀಪ—
ದಂದ ಮಿದುಳಿನ ತಲೆಗಳನ್ನು ಮುಟ್ಟಿ,
ಸತ್ಯವೀರರ ನಿತ್ಯ ಶುದ್ಧ ನಾಲಗೆಯಿಂದ
ಬಂದುಸಿರ ಕಣೆಗಳಿಗೆ ಬೆನ್ನುಗೊಟ್ಟು,
ಪ್ರೀತಿ ವಾತ್ಸಲ್ಯಕ್ಕೆ ಅಭಿಷೇಕಗೈಯುತಿಹ
ಸಾಧ್ವಿಯರ ಕಣ್ಣೀರ ನಂಜ ಕುಡಿದು,
ನಿನ್ನ ಕೋಪದ ಪಿತ್ತವನು ಕಾರಿಕೊಂಡು
ಅದರ ಕೋಪದ ಹಿರಿಯ ಹೊರೆ ಹೇರಿಕೊಂಡು
ಮುಕ್ಕರಿಸಿ ಮುಗಿಬಿದ್ದು ಕಣ್ಮುಚ್ಚುವಂದು
ನಿನಗೊಂದು ಶಾಂತಿ—ಆ ಜನಕೆ ಬೇರೊಂದು-! (೯) 39

ಈ ಸಂತಾಪಸೂಕ್ತಗಳ ಉರಿವಾತಿನಲ್ಲಿ ಹೃದಯವನ್ನದ್ದಿದಾಗ ಸುಡದೆ ಉಳಿಯುವುದು ಸಾತ್ವಿಕ ಆತ್ಮ, ಸುಟ್ಟು ಭ್ರಮಿಸುವುದು ತಾಮಸ ಆತ್ಮ. ಇಂಥ ಶಾಪಶಕ್ತಿಯುಳ್ಳ ಸರಸ್ವತಿ ಸಮಾಜದಲ್ಲಿಯ ಪಾಪಖಾಂಡವನ್ನು ದಹಿಸಲು ಇಂದಿಗೂ ಅಗತ್ಯ, ಎಂದಿಗೂ ಅಗತ್ಯ. ಸಾಹಿತ್ಯದ ಬಾರುಗೋಲೆನಿಸಿದ ವಿಡಂಬನದ ವಿವಿಧ ವೈಖರಿಯಲ್ಲಿ ಬೇಂದ್ರೆಯವರು ಹೀಗೆ ಸಿದ್ಧಹಸ್ತರು, ಅಕ್ಷಯತೂಣೀರವುಳ್ಳವರು.

VII
ರಸದರ್ಶನ

ಈಗತಾನೆ ಉರಿಬೇಂದ್ರೆಯವರನ್ನು ಕಂಡದ್ದಾಯ್ತು, ಇನ್ನು ಸಿರಿಬೇಂದ್ರೆಯವರೆಂತಿದ್ದಾರೆ ಎಂಬುದನ್ನು ನೋಡೋಣ.

ಸವಿರಾಗ ಬೆರೆಸಿದಾ ಉಸಿರು
ಇದಕ ಯಾ ಹೆಸರು
ಇದಕ ಯಾ ಹೆಸಽರಽ ?
    ಅಂಬಿಕಾತನಯನ ಹಾಽಡಽ
    ಬೆಳುದಿಂಗಳ ನೋಽಡಽ ॥ 40

ಇದೇ ಅವರ ದರ್ಶನದ ಆನಂದ ಲೀಲೆಯ ಪೀಠಿಕೆ.

‘ಆನಂದಾಧ್ಯೇವ ಖಲ್ವಿಮಾನಿಭೂತಾನಿ ಜಾಯಂತೇ
ಆನಂದೇನ ಜಾತಾನಿ ಜೀವಂತಿ
ಆನಂದಂ ಪ್ರಯಂತ್ಯಭಿಸಂವಿಶಂತಿ’

ಎಂಬುದು ಅದಕ್ಕೆ ಬೀಜಮಂತ್ರ.

ಆ ಕ್ಷೀರ ಸಾಗರ-
ದಾನಂದದಾಗರ
ತೆರಿ ತೆರಿ ತೆರೆದರ ಕುಣಿಯೋಣ ಬಾ— 41

ಎಂದಹಾಗೆ ಅವರ ಆತ್ಮಾನಂದ ಕಡಲಲೆಗಳಂತೆ ಅಲೆಯಲೆಯಾಗಿ ಎದ್ದು ಚಿಮ್ಮಿ ಕುಣಿದ ಲಾಸ್ಯದಲ್ಲಿ ಲಯಿಸದ ರಸಿಕಜೀವವುಂಟೇ? ಅಹಮಳಿದ ವಿಶ್ವಾನರ (Universal Man) ಪ್ರಜ್ಞೆಯಿಂದೆದ್ದ ಅವರ ಪ್ರೇಮಗೀತೆಗಳ ದಳ್ಳೊನಲುಗಳ ಬೆಳ್ನೊರೆಗಳ ಬಗೆಯನ್ನಿಷ್ಟು ಬಗೆಯೋಣ; ಅಂಬಿಕಾತನಯನ ಹಾಡೆಂದರೆ ಬೆಳುದಿಂಗಳು ಎಂಬುದು ನಿಜವೇನೆಂದು ನೋಡೋಣ.

ವಾರಿನೋಟ ಹಾರತಿತ್ತೋ ಹೊಳಿವ್ಯಾಗ
ಹೊಸಾ ಹರೆ ಈಸತಿತ್ತೋ ಹೊಳಿಯಾಗ
ಒಂದು ಬಳ್ಳಿ ಹೂ ಬಿಡಲಿತ್ತೋ ಹೊಳಿವ್ಯಾಗ
ಗಾಳಿಯೊಂದು ಸುಳಿದಾಡತಿತ್ತೋ ಹೊಳಿಯಾಗ
ಸೂಜಿಗಲ್ಲು ತಿರುಗತಿತ್ತೋ ಹೊಳಿವ್ಯಾಗ

ಸೂಜಿಯೊಂದು ತೇಲತಿತ್ತೋ ಹೊಳಿಯಾಗ
ಪೆರಗು ಒಂದು ಅಲೆದಾಡತಿತ್ತೋ ಹೊಳಿವ್ಯಾಗ
ಬೆರಗು ಒಂದು ನಲಿದಾಡುತ್ತಿತ್ತೋ ಹೊಳಿಯಾಗ
ತುಂಬಿಯೊಂದು ಹಾಡತಿತ್ತೋ ಹೊಳಿವ್ಯಾಗ
ತಾವರ್‍ಯೊಂದು ಬಾಯ್ಬಿಡತಿತ್ತೋ ಹೊಳಿಯಾಗ! 42

ಈ ಪೃಥ್ವಿಯು ಹರಿಯುದಿಂದ ಪ್ರೇಮೋತ್ಪತ್ತಿಯು ಪ್ರಾರಂಭ. ಗಂಡಿಗೆ ಹೆಣ್ಣಿನ ಹುಚ್ಚು, ಹೆಣ್ಣಿಗೆ ಗಂಡಿನ ಹುಚ್ಚು.

ದಿನಕೊಂದು ದಂಪತಿಗೆ ಇನ್ನೊಂದು ಗಂಟು
ದಿನದ ಸಂಸಾರದಲಿ ಬೇರೆ ಸವಿಯುಂಟು. 43

ಆ ಮುಖಾ—ಈ ಮುಖಾ
    ಯಾವ ಗಂಡೊ
    ಯಾವ ಹೆಣ್ಣೊ
ಪ್ರೀತಿಯೆಂಬ ಚುಂಬಕಾ
    ಕೂಡಿಸಿತ್ತು
    ಆಡಿಸಿತ್ತು
ಕೂಡಲದೊಲು ನೋಟವಾ
ಮೂರು ದಿನದ ಆಟವಾ! 44

ಈ ಮೂರು ದಿನದ ಆಟದಲ್ಲಿ—

ವಾದಕ್ಕೆ ಪ್ರತಿವಾದ
ಸಾಕು ವಾದವಿವಾದ
ಜೀವಸಂವಾದಕ್ಕೆ ಹಸಿದು ಬಂದೆ
ನೀಡು ಸಿಪ್ಪೆಯು ಸುಲಿದು ತಿಳಲನೊಂದೆ.
ಜೀವ ಜೀವಾಳದಲಿ
ಹೃದಯಾಂತರಾಳದಲಿ
ಇಳಿದು ನೋಡು

ಬಗೆಯು ಬಾನ್ ಬಯಲನ್ನು
ಅಳೆದು ನೋಡು ! 45

ಎಂಬ ಹೃದಯಸಮುದ್ರಮಥನ ದಂಪತಿಗಳಲ್ಲಿ ನಡೆದಾಗ—

ಮುನಿದರೂ ಕ್ಷಮಿಸುವೆನು
ಕೂಸಿನೊಲು ರಮಿಸುವೆನು
ಅಂಗೈಯ ಹುಣ್ಣಿನಾರೈಕೆ ಕೊಡುವೆ
ಕೂಸೆಂದು ಹುಡುಗನೊಲು ಮುತ್ತನಿಡುವೆ.

ನಿನ್ನ ಕಣ್ಣೀರ್ಮುತ್ತು
ನನ್ನ ಕೊರಳಿನ ಸುತ್ತು
ಆಭರಣವೆಂದು ಮೆರೆದಾಡುತಿರುವೆ
ಸ್ವರ್ಗ ನರಕಕ್ಕೆ ಕರೆದಲ್ಲಿ ಬರುವೆ ! 46

'ಅದ್ಯಪ್ರಭೃತ್ಯವನತಾಂಗಿ ತವಾಸ್ಮಿ ದಾಸಃ' ಎನ್ನುತ್ತಾನೆ ಪುರುಷ ಪ್ರಕೃತಿಗೆ, ಶಿವ ಶಕ್ತಿಗೆ. ಈ ಪಕ್ವಾವಸ್ಥೆಯೇ ಗಾರ್ಹಸ್ಥ್ಯದ ಅಗ್ನಿಪರೀಕ್ಷೆಯಲ್ಲಿ ಪಾಸಾದುದರ ಫಲ. ಅನಂತರವೋ—

ಪ್ರಕೃತಿ ಪುರುಷಗೆ ಸೋತು
ಪ್ರಾಣದ್ವಂಜಿಯೆ ನೂತು
ಅನುಭವದ ಕಿವಿಮಾತು ಅರ್ಧಾಂಗ ! 47

ಇಂಥ ಅನುಭವದ ಕಿವಿಮಾತೆಂದರೆ—

ಬರುವದೇನೆ ನೆಪ್ಪಿಗೆ
ನಾವು ಬಿದ್ದ ಟೊಪ್ಪಿಗೆ
ತಲೆಯ ತೆರೆದು ಬಂದಿತು
ಎಚ್ಚರೆಚ್ಚರೆಂದಿತು.

ಯಾವ ಲೋಕದಿಂದಲಿಳಿದೊ
ಹೊಸ ಸುಗಂಧ ಬೀರಿದೆ
ರಣೋತ್ಸಾಹ ಕಹಳೆಯಂತೆ
ನವಚೇತನ ಊರಿದೆ
ಇಬ್ಬರನ್ನು ನೂಗಿಕೊಂಡು
ಒಬ್ಬನಾಗಿ ಎದ್ದಿದೆ
ಚಿತ್ತವೆಲ್ಲಿ ಎನುವಾಗಲೆ
ಕೊಡುವ ಮೊದಲೆ ಕದ್ದಿದೆ
ಸಲ್ಲುವಲ್ಲಿ ಸಂದಿದೆ
ನಿಲ್ಲುವಲ್ಲಿ ನಿಂದಿದೆ
ಬರುವದೇನೆ ನೆಪ್ಪಿಗೆ
ಜೀವ ಜೀವದಪ್ಪಿಗೆ! 48

ಎಂಬಂತೆ ಸುಖದುಃಖಾದ್ವೈತ ದಂಪತಿಗಳಿಗೆ ಸಿದ್ಧಿಸುತ್ತದೆ. ಅನೇಕವಾಗಿ ಸ್ಪಷ್ಟವಾದ ಹೃದಯಗಳ ಏಕೀಕರಣದ ಮಧುರಾವಟಿಯೆಂದರೆ ದೇಹದಪ್ಪಿಗೆಯಿಂದ ಮುಂದೆ ಜೀವದಪ್ಪಿಗೆಯನ್ನು ಒಡರಿಸುವ ಶುದ್ಧಪ್ರೇಮವೇ. ಜಾತಿ, ಗೋತ್ರ, ಕುಲ, ದೇಶ, ವಯು, ಲಿಂಗ, ಶರೀರ ಮುಂತಾದ ಉಪಾಧಿಗಳ ದೆಸೆಯಿಂದ ಲೌಕಿಕ ಪ್ರೇಮ ಬಗೆಬಗೆಯಾಗಿದೆ. ಅದು ನಿರುಪಾಧಿಕವಾದಾಗ ದೈವಿ ಅಥವಾ ಆಧ್ಯಾತ್ಮಿಕ ಎನಿಸುತ್ತದೆ, ವಿಶ್ವವ್ಯಾಪಕವಾಗುತ್ತದೆ. ಹೃದಯಶಾಸ್ತ್ರದ ಈ ನಿರುಪಾಧಿಕ ಪ್ರೇಮವು ಜ್ಞಾನಶಾಸ್ತ್ರದಲ್ಲಿ ಬೆಳಕು, ಕ್ರಿಯಾಶಾಸ್ತ್ರದಲ್ಲಿ ಏಕೀಕರಣ, ಏಕಮತ, ಸಹಕಾರ, ಸಹಜೀವನ. ಅದು ಶಾರೀರಿಕ ಮಟ್ಟದಿಂದ ಉದಾತ್ತವಾಗುತ್ತ ಹೋಗುವಾಗ ವೈಯಕ್ತಿಕ ಮತ್ತು ಸಾಮೂಹಿಕ ಲೌಕಿಕತೆಯಲ್ಲಿ ಹಾಯ್ದು ನೈತಿಕ

ಮಾನಸ ಸಹಾನುಭೂತಿಯ ಮೆಟ್ಟಲೇರಿ ಇಂದ್ರಿಯಾತೀತ ಹಾಗೂ ಮನ, ಬುದ್ಧಿ, ಅಹಂಕಾರ, ಚಿತ್ತಗಳನ್ನು ಮೀರಿದ ವಿಶ್ವಾಹಂಕಾರದ ಆತ್ಮರತಿಯಾಗುತ್ತದೆ. ಅದು ಸತ್ಯ, ಜ್ಞಾನ, ಅನಂತ; ಸತ್, ಚಿತ್, ಆನಂದ; ಸತ್ಯ, ಶಿವ, ಸುಂದರ. ಸತ್ತ್ವೋದ್ರೇಕದಿಂದ ಹಾರಲೆದ್ದ ಈ ಹೃದಯ ಪಕ್ಷಿಯ ಪ್ರೇಮ ವಿಹಾರದ ಹಲವು ಮಜಲುಗಳನ್ನು ಇಂತು ಬೇಂದ್ರೆಯವರ ಕವನಗಳಲ್ಲಿ ಗುರುತಿಸಬಹುದು. ಮೇಲಿನದು ದಾಂಪತ್ಯಪ್ರೇಮ ವಿಕಾಸದ ಚಿಕ್ಕ ವಿಹಂಗಮಾವಲೋಕನವಷ್ಟೆ. ಸತ್ವದ ಡಿಗ್ರಿ ಹೆಚ್ಚಿರುವ ಮಾತೃಪ್ರೇಮದ ಸೆಲೆಯಿಂದಲೇ 'ಅಂಬಿಕಾತನಯ'ರಾದ ಬೇಂದ್ರೆಯವರ ಪ್ರೇಮಸ್ಥಾಯಿಯತ್ತ ಸ್ವಲ್ಪ ಹಣಿಕಿ ಹಾಡೋಣ.

'ತಾಯೆ ತನಿಮನೆಯ ನೀ ಅಕ್ಕಅಕ್ಕರತೆಯೋ' 49

ಎಂಬಲ್ಲಿ ಪ್ರಾರಂಭವಾದ ತಾಯ ಮೆಚ್ಚಿಕೆ ನೆಚ್ಚಿಕೆಯಾಗಿ

'ನಿನ್ನ ನೆನವೇ ನಿನಗೆ ಪ್ರತಿಪ್ರತಿಭೆಯಾಗಿರಲು
ನಿನ್ನ ಮೂರ್ತಿಯ ಕಾವ್ಯವಸ್ತು ಮಾಡಿ
ಇನ್ನು ಮುನ್ನಿನ ಜನ್ಮ ಹಾಡಿ ಉದ್ಧರಿಸುವೆನು
ನಿನ್ನ ತೊಡೆಯಿರಲೆನಗೆ ಪವಡಿಸಲು ಆಡಿ' ೫೦

ಎಂದು ಪ್ರತಿಜ್ಞಾಬದ್ಧರಾಗಿ ಅಂಬಿಕಾತನಯರು—

'ಇಳಿದು ಬಾ ತಾಯಿ ಇಳಿದು ಬಾ
ಹರನ ಜಡೆಯಿಂದ
ಹರಿಯ ಅಡಿಯಿಂದ
ಋಷಿಯ ತೊಡೆಯಿಂದ
ನುಸುಳಿ ಬಾ
ದೇವದೇವರನು ತಣಿಸಿ ಬಾ

ದಿಗ್ದಿಗಂತದಲಿ ಹಣಿಸಿ ಬಾ
ಚರಾಚರಗಳಿಗೆ ಉಣಿಸಿ ಬಾ
ಇಳಿದು ಬಾ ತಾಯಿ ಇಳಿದು ಬಾ' 51

ಎಂದು ಕರೆದಾಗ ರಸಗಂಗಾವತರಣವಾಯ್ತು, ಹಾಡು ಹೊನಲ್ವರಿಯಿತು, ಹಾಲುಗಡಲಿನ ಸೀಮೆಯಾಯಿತು, ನಿರ್ಮಲಾಂತಃಕರಣ ಸಿದ್ಧಿಸಿತು, ಅರ್ಥಕಾಮಾಸಕ್ತಿ ಮುಸು ಳಿತು, ಆಧ್ಯಾತ್ಮಿಕತೆ ಹೊಳೆಯಿತು, ಲೀಲಾನಂದ ಬೆಳೆ ಯಿತು. ಹಡೆದ ತಾಯಿ ಭೂಮಿ ತಾಯಾದಳು. ಆ ಭೂಮಿ ತಾಯಿಯೋ—

ಮೈತುಂಬ ಬಾಯಿ ನೀನು
ತುಟಿಮುದ್ದು ನನ್ನ ಪಾಲು!
ಎದೆತುಂಬ ಮೊಲೆಯು ನೀನು
ಮೈತುಂಬ ನನಗೆ ಹಾಲು!
ಕಂಡಲ್ಲಿ ನಿನ್ನ ಮುಖವು
ಕಣ್ತುಂಬ ನನಗೆ ಸುಖವು
ನೆಲದುದ್ದ ತೊಡೆಯು ನಿನಗೆ
ಮನವಾರೆ ನಿದ್ದೆ ನನಗೆ
ನೀ ತಿರುಗುತಿದ್ದರೇನು
ನೀನಿಲ್ಲದೆಡೆಯು ಇಲ್ಲ
ನಾ ತಪ್ಪಿ ನಡೆದರೇನು
ನೆಲೆಬೇರೆ ಕಾಲಿಗಿಲ್ಲ!

ಎಂಬಂತೆ ಕಾಣಿಸಿ ಸಾಧಕ ಜೀವನಕ್ಕೆ ಅಭಯ ಸಿದ್ಧಿ ಯಾಯಿತು. ಜಗನ್ಮಾತೆಯ ಬಲದಿಂದ ಕವಿಜೀವವಿನ್ನೂ ಮುಂದಡಿಯಿಡುತ್ತದೆ. ವಿಶ್ವಶಕ್ತಿಯ ಮಾತೃತ್ವವಿನ್ನದನ್ನು ನಡೆಯಿಸುತ್ತದೆ.

ಅನಂತರ ಭಗವದ್ರತಿ ವಿಕಾಸಕ್ಕಾರಂಭ:

'ಭಂಗಾರದ ನೀರ ಕಡಲಾಚೆಯೊಚೆಗಿದೆ ನೀಲ ನೀಲ ತೀರಾ
ಮಿಂಚು ಬಳಗ ತೆರೆತೆರೆಗಳಾಗಿ ಅಲೆಯುವುದು ಪುಟ್ಟಪೂರಾ
ಅದು ನಮ್ಮ ಊರು, ಅದು ನಿಮ್ಮ ಊರು, ತಂತಮ್ಮ ಊರೊ ಧೀರಾ
ಅದರೊಳಗೆ ನಾವು, ನಮ್ಮೊಳಗೆ ತಾವು, ಅದು ಇಲ್ಲ ಬಹಳ ದೂರಾ

ಕರೆ ಬಂದಿತಣ್ಣ, ತೆರೆ ಬಂದಿತಣ್ಣ, ನೆರೆ ಬಂದಿತಣ್ಣ ಬಳಿಗೆ
ಹರಿತಽದ ಭಾವ, ಬೆರಿತಽದ ಜೀವ, ಅದರೊಳಗಿನೊಳಗಿನೊಳಗೆ
ಇದೆ ಸಮಯವಣ್ಣ, ಇದೆ ಸಮಯ ತಮ್ಮ, ನಂನಿಮ್ಮ ಆತ್ಮಗಳಿಗೆ
ಅಂಬಿಗನು ಬಂದ, ನಂಬಿಗನು ಬಂದ, ಬಂದಽದ ದಿವ್ಯಗಳಿಗೆ
ಇದು ಉಪ್ಪುನೀರ ಕಡಲಲ್ಲೊ ನಮ್ಮ ಒಡಲಲ್ಲು ಇದರ ನೆಲೆಯು
ಕಂಡವರಿಗಲ್ಲೊ ಕಂಡವರಿಗಷ್ಟೆ ತಿಳಿದಽದ ಇದರ ಬೆಲೆಯು

ಎಂದು ಹೃದಯ ಸಮುದ್ರ ತೆರೆಯೆದ್ದಿತು. ಆಗ—

'ಸುಖದುಃಖ ಸಂಗಮವಾದ ಹೃದ್ರಂಗವು
ಪಾವನವೆಂಬೆನು ಯಾವಾಗಲೂ'

ಎಂಬ ಸ್ಥಿತಿಯುಂಟಾಯಿತು. ಈ ಸ್ಥಿತಿಯಿಂದ ನೋಡಿದ ನೋಟವಾದರೋ—

ಅಂಬಿಕಾ ತನಯನ ಜಂಭದ ಪಾಡಳಿದು
ನಂಬಿಕೆಯ ಹಾಡಾಗಿ ಬಂತಿಲ್ಲಿಗೆ: 52

ಆ ಹಾಡೋ—

ನೀ ನನ್ನ ಶಕ್ತಿ, ನಾ ಭಕ್ತಿ
ತೆರೆಯಿತಽ ಶುಕ್ತಿ
ಬೇರೆಯಿಲ್ಲ ಮುಕ್ತಿ। ಬೇರೆಯಿಲ್ಲ ಮುಕ್ತಿ।

ನಿನನಲ್ಲ ಎಲ್ಲಾರಾಗ ಒಂದ । ಒಂದ ನೂರೊಂದ । ಇದರ
ಸವಿಮುಂದ
ತೋರುವರವಿಂದೋಂ—ಸಚ್ಚಿದಾನಂದ ।
ಎಲ್ಲೆಲ್ಲ್ಲಿ ಬೆಳಕು ಇರಲಾಕ ಅಳುತಿ ನೀಹಾಡಿ ।
ಒಡಲ ಮರಿಮಾಡಿ ॥
ಒಳಹೊರಗು ಬೆಳಕು ನಾನಿರಲು ಯಾಕ ನಿನ ಹಣತಿs ।
ಬಾರ ನನ ಗೆಣತಿ ॥
ತೆರಿ ತೆರೀ ನಿನ್ನ ಎದಿಕದಾ
ಬಂದಿತ ಹದಾ
ಕೇಳ ಈ ಪದಾ । ಕೇಳ ಈ ಪsದಾ
ಗುರುದತ್ತ ಸಚ್ಚಿದಾನಂದ । ಸಚ್ಚಿದಾನಂದ ಸಚ್ಚಿದಾನಂದ ।
ಸಚ್ಚಿದಾನಂದೋಂ—ಸಚ್ಚಿದಾನಂದ ॥ 53

ಈ ನೆಲೆಯನ್ನು ಮುಟ್ಟಿದ ಕವಿ ಜೀವವು....

'ನಾವು ಬರತೇವಿನ್ನ ನೆನಪಿರಲಿ ತಾಯಿ
ನಂ ನಮುಸ್ಕಾರ ನಿಮುಗ
ಕಾಯ್ದಿರಿ-ಕೂಸಿನ್ಹಾಂಗ ನಮುಗ-
ನಾವು ಬರತೇವಿನ್ನ, 54

ಎಂದು ವಿಶಾಲ ವಿಶ್ವದಲ್ಲಿ ಗಗನ ವಿಹಾರಿಯಾಗಿ ತನನಿಸ ತೊಡಗಿತು; 'ಬಿಟ್ಟಲ್ಲಿಯೆ ಬೀಡು ಮತ್ತೆ ಆಡಿದಲ್ಲೆ ಅಂಗಳು, ಉಳಿದ ಲೋಕ ಹಿತ್ತಿಲು' ಎಂದು ತಿರುಗತೊಡಗಿತು. ಈ ವಿಶ್ವಂಭರ ಪ್ರಜ್ಞೆ ಯಾವುದರ ಬಗ್ಗೆ ಹಾಡಿದರೂ ಅದು ವಿಶ್ವ ದಗಲದ ಅಳತೆಗೆ ಕಡಿಮೆಯಾಗದಾಯಿತು. ಮಾತು ಮಾತೆ ಯಾದಾಗ ರಸ ಮುದ್ದಾಗದೆ ಉಳಿದೀತೇ? ಮಿಂಚಿ ಮಾಯ ವಾಗದೆ, ಅಚ್ಚಳಿಯದೆ ಉಳಿಯುವುದು, ಪವನದಂತೆ ಪಾವನ ವಾದ, ವಿಶ್ವೋಪಮ-ವಿಶ್ವರೂಪಕಗಳು ಅವರ ಹಾಡಿನಲ್ಲಿ

ರತ್ನದಂತೆ ತಲೆಯೆತ್ತಿ ನಿಲ್ಲುವಂತಾಯ್ತು. ಅಂಥ ಜ್ಯೋತಿ ರ್ವಯಾಲಂಕಾರಕ್ಕೆ ಕೆಲ ನಿದರ್ಶನಗಳಿಲ್ಲಿವೆ:

'ಮುಗಿಲ ಬಾಯ ಗಾಳಿಕೊಳಲ ಬೆಳಕಹಾಡ ಬೀರಿ'

'ಬೆಳಕಿಗಿಂತ ಬೆಳ್ಳಗೆ ಇತ್ತ
ಗಾಳಿಗಿಂತ ತೆಳ್ಳಗೆ ಇತ್ತ'

'ಬೆಳೆವಗೆ ನೆಲವೆಲ್ಲ ಹೊಲ'

'ಸುರಸ್ವಪ್ನವಿದ್ದ ಪ್ರತಿಬಿಂಬ ಬಿದ್ದ
ಉದ್ಬುದ್ಧ ಶುದ್ಧ ನೀರೇ
ಎಚ್ಚತ್ತು ಎದ್ದ ಆಕಾಶದುದ್ದ
ಧರೆಗಿಳಿಯಲಿದ್ದ ಧೀರೇ
... ...
ರಸಪೂರಜನ್ಯೆ ನೀನಲ್ಲ ಅನ್ಯೆ
ಸಚ್ಚಿದಾನಂದ ಕನ್ಯೆ'

'ಕ್ರಿಮಿಕೀಟ ತುಂಬಿ ಊಟೀಟು ತುಂಬಿ ದನಿಮಿಾಟು ತುಂಬಿ ತುಂಬಿ
ಇದ್ದದ್ದು ತುಂಬಿ ಇಲ್ಲದ್ದು ತುಂಬಿ ಆಹುದಲ್ಲದೆಲ್ಲ ತುಂಬಿ
ನರತ್ಯಾಗ ತುಂಬಿ ಸುರಭೋಗ ತುಂಬಿ ವರಯೋಗ ತುಂಬಿ ತುಂಬಿ
ಪೊಳ್ಳೆಲ್ಲ ತುಂಬಿ ಜೊಳ್ಳೆಲ್ಲ ತುಂಬಿ ಶೂನ್ಯಾಽಕಾರ ತುಂಬಿ'

'ಬಾನಗಲ ತೊಟ್ಟಿಲಲ್ಲಿ
ನೀ ತೂಗುತಿರಲು ನನ್ನ
ಕಟ್ಟಿರಲು ಚಿಕ್ಕೆ ಚಟ್ಟು
ನಾಮರೆವುದೆಂತು ನಿನ್ನ'

'ಕತ್ತಲನ್ನು ಹೊಸೆದು ತಿಕ್ಕೆ
ಹಡೆದಿತೇನೊ ಬೆಳ್ಳಿಚುಕ್ಕೆ
ಅಹಾ! ಏನು ನಗೆಯು ನಕ್ಕೆ!'

‘ಗುಡ್ಡ ಗುಡ್ಡ ಸ್ಥಾವರ ಲಿಂಗ
ಅವಕ ಅಭ್ಯಂಗ
ಎರಿತಾವನ್ನೊ ಹಾಂಗ
ಕೂಡ್ಯಾವನೋಡ । ಸುತ್ತೆಲ್ಲ ನೋಡ ನೋಡ ॥’

‘ಮಣ್ಣುಗೊಂಬೆಗಳಿಗೆಲ್ಲ
ಜೀವಕಳೆಯು ತುಂಬಿದಂತೆ
ಜಡವೆ ಜಂಗಮವಾದೀತಿಲ್ಲಿ
ಕೊಳಲಿನುಸಿರು ಪಸರಿಸೀಗ’

‘ಇರುಳ ಹೆರಳಿನಾ ಅರಳಮಲ್ಲಿಗೀ
ಜಾಳಿಗಿ ಹಾಂಗೆತ್ತ
ಸೂಸ್ಯಾವ ಚಿಕ್ಕಿ ಅತ್ತಿತ್ತ’

‘ಭರತಮಾತೆಯು ಕೋಟಿ ಕಾರ್ತಿಕೋತ್ಸವದಲ್ಲಿ
ಮಿನುಗುತಿಹ ಜ್ಯೋತಿ ನಾನು ।’

‘ತಾಕಿದರೆ ಸಾಕು ತೊಡೆಯು
ನೂಕಿತು ಹಾಡ ಹೆಡೆಯು’

‘ಕ್ಷೀರಸಾಗರದಲೆಯು ತಲೆಯು ಪೆರೆಯೋ’

‘ಏರಿದೇರಿದನೇರಿ ಗಾಳಿಗುದುರೆ ಸವಾರಿ
ಚಂದ್ರಕಿರಣವಮಾರಿ ಸೂರ್ಯಸೇರಿ
ಬೆಳಕನ್ನೆ ಹಿಂದೊಗೆದು ತಮದ ಬಸಿರನೆ ಬಗೆದು
ಅಸ್ಪರ್ಶ ಅವಕಾಶದಲ್ಲಿ ಇದ್ದ’

‘ನೂರು ಮರ ನೂರು ಸ್ವರ’

‘ಕತ್ತಲಲ್ಲೆ ಬೆಳಕು ಮಿಂಚಿ ಪಡೆಯಿತೇಳು ಬಣ್ಣ
ಮೂಕ ಧ್ಯಾನತೂಕಮಾರಿ ದನಿಯು ಹುಟ್ಟಿ ಸಣ್ಣ
ಕಣ್ಣು ಮಣ್ಣು ಕೂಡಲಲ್ಲಿ ಹಾಡು ಕಟ್ಟಿತಣ್ಣ ॥’

'ಕೂಸು-ಮಾತಿಗೆ ಮೌನ ತಾಯಿಮಡಿಲು ಸದೈವ;
ಮಾತು ಮೌನದಪ್ರತಿಮೆ, ಮೌನ ಮಾತಿನ ದೈವ.' ೫೫

ಇಲ್ಲಿ ನೆನಪಿದ್ದುವುಗಳನ್ನೇ ಕೊಡಲಾಗಿದೆ. ಸ್ವಯಂಪ್ರಭವಾದ ಇಂಥ ಇತರ ಉದಾಹರಣೆಗಳನ್ನು ರಸಿಕರು ಹುಡುಕಿಕೊಳ್ಳಬಹುದು.

VIII

ಲೋಕ ಸಾಮರಸ್ಯ

'ರಸವೆ ಜನನ
ವಿರಸ ಮರಣ
ಸಮರಸವೇ ಜೀವನ' ೫6

ಎಂಬುದು ಬೇಂದ್ರೆಯವರ ಲೋಕಸಾಮರಸ್ಯದ ಮಂತ್ರ, ಅವರ ವಾಣಿ ಜನವಾಣಿಯಾದುದರ ರಹಸ್ಯ. ಕೂಸಿಗೆ ಲಾಲಿಯಾಗಿ, ತಾಯಿಗೆ ಕೂಸಿನ ಮುದ್ದಾಗಿ, ದಂಪತಿಗಳಿಗೆ ಪ್ರೇಮವಾಗಿ, ಗಂಡಿಗೆ ಕೆಚ್ಚಾಗಿ, ಹೆಣ್ಣಿಗೆ ನೆಚ್ಚಾಗಿ, ಬಾಳಿಗೆ ಬ್ರಹ್ಮವಾಗಿ ಹರಿಯುವ ಗುಣ ಅವರ ಗೀತಕ್ಕೆ ಬಂದುದು ಹೃದಯದ ತನ್ಮಯೀಭವನ ಶಕ್ತಿಯಿಂದಲೇ. ಜಗದ ಜೀವಗಳ ಸುಖದುಃಖಗಳಲ್ಲಿ ಲೀನವಾಗಬಲ್ಲ ಅವರ ದುಗ್ಧ ಸಾಗರದಂಥ ಮುಗ್ಧಪ್ರಜ್ಞೆಯಲ್ಲದೆ ಮತ್ತಾವುದು—

'ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ
ಕಣ್ಣಿಗು ಕಣ್ಣಾಗಿ ಒಳಗಿಹುದು' 57

ಎಂದು ಅರಿಯ ಬಲ್ಲುದು? ದೇಶದಲ್ಲಿಯ ದರಿದ್ರ ಲಕ್ಷ್ಮೀಪತಿಯ ಎದೆಯಲ್ಲಿ ಹೊಕ್ಕು ಮುಳುಗಿ ಏಳದೆ ಅದೆಂತು ಅವರ ಬಾಯಿಂದ

'ಹಸಿದವ ಬಲ್ಲ ಹಸಿವೆಯ ಶೂಲಿ'

ಎಂಬಂತಹ ಮಹಾವಾಕ್ಯ ಹೊರಬಿದ್ದೀತು? ಕನ್ನಡಿಗರ ನಿರ್ವೀರ್ಯತೆಗೆ ಕೆರಳಿ ತಾಯ್ನೆಲದ ಸೋದರರೊಡನೆ ಭಾವೈಕ್ಯ ಹೊಂದಿದಲ್ಲದೆ—

'ಚಂಡಿ ಚಾಮುಂಡಿ ಕೇಳ್ ಬೇಕಾದುದೇನು?
ಗಂಡುಸಾದರೆ ನಿನ್ನ ಬಲಿಕೊಡುವೆಯೇನು?' 58

ಎಂಬ ಆಹ್ವಾನದ ಘೋಷ ಹೊರಹೊರಟೀತು? ಹರಿದು ಹಂಚಿಹೋದ ಕನ್ನಡಿಗರ ಆಳುಬಾಳಿನ ಅವಮಾನಕರ ಅವಸ್ಥೆಯಿಂದ ಕೆದರಿ ಕಿಚ್ಚಾಗದೆ ಅವರೆದೆ—

'ಕನ್ನಡ ದೀಕ್ಷೆಯ ಹೊಂದಿದ ಪ್ರತಿಯೊಬ್ಬನು ಆರ್ಯ
ಕನ್ನಡ ತೇಜವು ಸಾರಲಿ ಕನ್ನಡಿಗರ ಕಾರ್ಯ
ಕನ್ನಡ ನಡೆ ಇರದವರೇ ಶೂದ್ರರು ಅನಿವಾರ್ಯ
ಇಂತರಿಯದ ಹೆರವರು ಅವರಿದ್ದರು ಒಂದೇ
ಇರದಿದ್ದರು ಒಂದೇ!' 59

ಇಂಥ ಕಾಹಲಕಲವನ್ನು ಹೊರಸೂಸಿತೇ? ಭಾರತದ ದಾಸ್ಯ ನರಕವನ್ನು ಕಂಡು ಹೇಸದೆ 'ಮೂವತ್ತಮೂರು ಕೋಟಿಯಲ್ಲಿ' 'ಗಂಡುತನಕೇಸೊ ಸೊನ್ನಿ' ಎಂದು ಘಂಟಾಘೋಷವಾಗಿ ಮೂದಲಿಸಲಾದೀತೇ? ಸುತ್ತುಮುತ್ತಲಿನ ಜನಜೀವನದಲ್ಲಿ ಶೋಷಣ ನಡೆಯುವುದನ್ನು ಕಂಡು ಮಲ ಮಲ ಮರುಗದೆ,—

'ಖಣವು ರಣವು, ಜನವು ಹೆಣವು ಸಾವಿಗಾಗಿ ದುಡಿವರೇ?
ಯಾರ ಬಾಳಿಗಾಗಿ ಯಾರೊ ಯಾವೊ ಕೈಗೆ ಮಡಿವರೇ?
ಕಾವ ಕೈಯ ಕೊಲ್ಲುತಿಹವು! ಮರಣದತ್ತ ನಡೆವರೇ?

ಸಾವಿಗಾಗಿ ತಪಿಸುವವರು ಬಾಳ-ಬೀಜ ಹಿಡಿವರೇ?
ಕಣ್ಣೀರಿನ ಕಡಲ ನಡುವೆ ತೇಲುತಿಹವು ನೆಲಗಳು
ತಾಯಿ-ಹಾಲ ಕುದಿಯುತಿಹುದು ಕೆಂಪೇರಲು ಜಲಗಳು' 60

ಇಂಥ ಹೃದಯದ್ರಾವಕ ನುಡಿ ಹೊರಹರಿವುದೆ? 'Sorrow and Suffering are Divine initiations— ದುಃಖ ಮತ್ತು ಕಷ್ಟಗಳನ್ನು ಅನುಭವಿಸುವುದೆಂದರೆ ದಿವ್ಯೋಪನಯನದ ಹಾಗೆ' ಎಂಬ ಮಾತು ಬೇಂದ್ರೆಯವರಲ್ಲಿ ನಿತ್ಯ ಸತ್ಯವೆಂಬಂತಾಗಿದೆ. ಈ ದಿವ್ಯೋಪನೀತ ಹೃದಯವಲ್ಲದೆ ಮತ್ತಾವುದು,—

'ಸುಖದುಃಖ ಸಂಗಮವಾದ ಹೃದ್ರಂಗವು
ಪಾವನವೆಂಬೆನು ಯಾವಾಗಲೂ' 61

ಎಂದು ಹಾಡಿದರೆ ನ್ಯಾಯವಾದೀತು? ಈ ಪಾವನತೆಯೇ ಕವಿಗಳನ್ನು ಆಧ್ಯಾತ್ಮಿಕತೆಯ ಮಾರ್ಗದಲ್ಲಿ ಮುನ್ನಡೆಸಿಕೊಂಡು ಹೋಗಿ—

'ನಾ ತೊಟ್ಟ ದೇಹಗಳ ಲೆಕ್ಕ
ಇಡುವರ ಸೊಕ್ಕ
ಯಮಾ ನೋಡಿ ನಕ್ಕ' 62

ಎಂದೂ

'ಆತನೀತನವಂತ ಯಾತನದ ಯಾತನೆಯು
ಯಾತ ಕಿರುಗುಟ್ಟೋದು ನಿಂಧಾಂಗ
ನಾನೀಗ ನುಡಿನುಂಗಿ ತಾನೀಗ ತಾನೆ ತಾ
ತಾನಾಗಿ ತನನನನ ಅಂಧಾಂಗ' 63

ಎಂದೂ 'ಯೂಯಂ ವಯಂ ವಯಂ ಯೂಯಂ' ಎಂಬ ವಿಶ್ವಬಂಧುತ್ವದ ಭಾವನೆಗೆ ಎಡೆಗೊಡುವ ಅನುಭವ ವಾಣಿಯನ್ನು ನುಡಿಸಿದ್ದು. ಅವರ ಮಾತು ಹೀಗೆ ತುಂಬಿ ಬರಲು ತುಂಬುಬಾಳಿನ ಅವರ ಆದರ್ಶಾನುಭೂತಿಯೇ ಕಾರಣ. ತುಂಬುಮಾತಿನ ಅವರ 'ಸಖೀಗೀತ'ವನ್ನೋದಿದಾಗ ಪ್ರಸ್ತುತ ಲೇಖಕನಿಗೆ ಉಂಟಾದ ಸ್ಫೂರ್ತಿ ಕೆಳಗಿನ ಸಾಲುಗಳಿಗೆಡೆಕೊಟ್ಟಿತು:

'ಕವಿ ಹೇಗಿದ್ದಾನ ನೋಡ ಈತ
ಬರೆದ ಸಖಿಗೀತ
ಬಲ್ಲ ಸವಿಮಾತ
ಇವನ। ಕಂಡೇ ಕವಿತಾ ಉಕ್ಕೋತ!'

'A poet is a nightingale, which sits in darkness and sings to cheer its own solitude with sweet sounds — ಕವಿಯು ಕೋಗಿಲೆ; ಕತ್ತಲಲ್ಲಿ ಕುಳಿತು ಮಧುರ ಧ್ವನಿಗಳಿಂದ ತನ್ನ ಏಕಾಂತದ ಬೇಸರವನ್ನು ಪರಿಹರಿಸಿಕೊಂಡು ಉತ್ಸಾಹ-ಉಲ್ಲಾಸಗಳನ್ನು ಸಂವರ್ಧಿಸಿಕೊಳ್ಳಲು ಹಾಡುವಾತ' ಎಂಬ ಮಾತಂತೂ ಹುಟ್ಟುರಸಿಕ ಬೇಂದ್ರೆಯವರಿಗೆ ಮೊದಲು ಅನ್ವಯಿಸುತ್ತದೆ. ಹೂತ ಹುಣಸೆಯ ಮರವನ್ನು ಕುರಿತು ಬರೆದ ಅವರ ಪದ್ಯದ ಕೊನೆಯಲ್ಲಿ—

'ಕವಿ ಜೀವದ ಬ್ಯಾಸರ ಹರಿಸಾಕ
ಹಾಡ ನುಡಿಸಾಕ
ಹೆಚ್ಚಿಗೇನು ಬೇಕ
ಒಂದು ಹೂತ ಹುಣಿಸಿ ಮರ ಸಾಕ!' 64

ಎಂಬ ಲೀಲಾಮಯವಾದ ಕಾವ್ಯಸಿದ್ಧಾಂತ ಉಕ್ತವಾಗಿದೆ. ಈ ಮಾತು ಎಲ್ಲ ಕಾವ್ಯ ಕಲೆಗಳ ಉಗಮವನ್ನು ಸೂಚಿಸುತ್ತದೆ, ಕಲೆಗಾರಿಕೆಯ ಜೀವನದ ಮೂಲ ಸೆಲೆಯನ್ನು ಗುರುತಿಸುತ್ತದೆ. ಈ ಶ್ರಾವಣಪ್ರಿಯ ಕವಿಗಳ ನಿಸರ್ಗ ಲಗ್ನ ಹೃದಯದ ಭಾವ-ತರಂಗಗಳ ನಾದವೇದ, ವರ್ಣನಾ ವೈದಗ್ಧ್ಯ, ಚಿತ್ರಣ ನೈಪುಣ್ಯ ಅಗಾಧವಾಗಿವೆ:

ಶ್ರಾವಣಾ ಬಂತು ಕಾಡಿಗೆ। ಬಂತು ನಾಡಿಗೆ
    ಬಂತು ಬೀದಿಗೆ। ಶ್ರಾವಣ ಬಂತು।
ಕಡಲಿಗೆ ಬಂತು ಶ್ರಾವಣಾ। ಕುಣಿದ್ಹಾಂಗ ರಾವಣಾ॥
    ಕುಣಿದಾವ ಗಾಳಿ। ಭೈರವನ ರೂಪತಾಳಿ।
ಶ್ರಾವಣ ಬಂತು ಘಟ್ಟಕ್ಕ। ರಾಜ್ಯ ಪಟ್ಟಕ್ಕ
    ಬಾನ ಮಟ್ಟಕ್ಕ
ಏರ್ಯಾವ ಮುಗಿಲು। ರವಿಕಾಣೆ ಹಾಡೆ ಹಗಲು।
ಶ್ರಾವಣಾ ಬಂತು ಹೊಳಿಗಳಿಗೆ। ಅದೇ ಶುಭಗಳಿಗೆ
    ಹೊಳಿಗೆ ಮತ್ತ ಮಳಿಗೆ।
ಆಗ್ಯೇದ ಲಗ್ನ। ಅದರಾಗ ಭೂಮಿ ಮಗ್ನ। 65

ಎಂದು ಮುಂತಾಗಿ ನೃತ್ಯಭಂಗಿಯಿಂದ ಸಲಿದು ನಡೆಯುವ ಅವರ ಕಾವ್ಯಕನ್ಯೆಯ ಕಮನೀಯತೆಯನ್ನು—

ತಯಾ ಕವಿತಯಾ ಕಿಂವಾ
ತಯಾ ವನಿತಯಾ ಚ ಕಿಂ।
ಪದವಿನ್ಯಾಸ ಮಾತ್ರೇಣ
ಯಯಾ ನಾಪಹೃತಂ ಮನಃ॥'

ಎಂಬ ಶ್ಲೋಕ ಚೆನ್ನಾಗಿ ವರ್ಣಿಸುತ್ತದೆ. ಬೇಂದ್ರೆಯವರು ಪದಪಂಡಿತರು; ಸರಸ್ವತಿಯ ಲೀಲಾಹಾಸ ಅವರ ಶೈಲಿಯ

ಉಸಿರು. 'ಗಾಳಿಕೆನೀ ಲೀನ ಮಾಡಿದ್ದಾರತಾನ' ಎಂಬಂತಹ ಉಕ್ತಿಚಾರುತ್ಯ ಅವರ ವಿಶಿಷ್ಟ ಸ್ವತ್ತು. 'ರಸೋ ವೈ ಸಃ- ಅದೇ ರಸ' ಎಂದು ಓದಿದ ಯಾರಾದರೂ ಉದ್ಗರಿಸಲೇಬೇಕು.

'ಮಣ್ಣಿ ಗೊಂಬೆಗಳಿಗೆಲ್ಲ
ಜೀವಕಳೆಯು ತುಂಬಿದಂತೆ
ಜಡವೆ ಜಂಗಮವಾದೀತಿಲ್ಲಿ
ಕೊಳಲಿನುಸಿರು ಪಸರಿಸೀಗ!' 66

ಎಂದ ಅವರದೇ ಮಾತಿನಂತೆ ಜಡಪದಗಳು ಬೇದ್ರೆಯವರ ಗಾರುಡಿಗ ಹಸ್ತದಲ್ಲಿ ಸಿಕ್ಕಿ ಜೀವತಾಳಿ ಹಕ್ಕಿಯಾಗಿ ಸೂರ್ಯಮಂಡಲವನ್ನೇ ಭೇದಿಸಿಕೊಂಡು ಮಿನುಗಿ ಹೇರಿಹೋಗುವಂತೆ ತೋರುತ್ತದೆ. ಹಾಗೆ ಹಾರುವಾಗ ನೆಲದ ಮಕ್ಕಳಿದೆಯನ್ನು ಸೂರ್ಯಮಂಡಲಕ್ಕೆ ಮುಟ್ಟಿಸಬಲ್ಲ ಸುವರ್ಣ ತಂತಿಯನ್ನು ಬಿಚ್ಚುತ್ತ ಹೋಗುತ್ತವೆ, ಅವು ತಮ್ಮ ಒಡಲೊಳಗಿಂದ–ಎನಿಸುತ್ತದೆ. ಈ ಭೂವ್ಯೋಮ ಸಂಗಮದ ನೆಲವನ್ನು ಮುಗಿಲೆತ್ತರಕ್ಕೆತ್ತುವ ಮಹಾ ಗರುಡ ಶಕ್ತಿ ಭಕ್ತ ಕವಿಗಳಾದ ಅವರ ಭಕ್ತಿ ಸಕ್ತದಿಂದ ಬಂದದ್ದು. 'ನನ್ನ ಹರಣ ನಿನಗೆ ಶರಣ' ಎಂದ ಅವರ ಧೀರ ಆತ್ಮಾರ್ಪಣಾಭಾವವೇ ಅವರ ಜೀವನದ ಜೀವಾಳ. 'ಹೋಗು ಸುಕ ವಿ-ರಸ-ದಾಸಿಯಾಗಿ ದುಡಿ' ಎಂದು ತಮ್ಮ ನುಡಿಗೆ 'ಮೇಘದೂತ'ದಲ್ಲಿ ಹೇಳಿದ ಅವರ ರಸವೀಯತೆ ಅನನ್ಯ ಸಾಧಾರಣ. 'Poetry is the light of Life—ಕಾವ್ಯ ಬಾಳ ಬೆಳಕು' ಎಂಬುದನ್ನು ಬೇಂದ್ರೆಯವರ ಕವಿತೆಗಳನ್ನೋದಿ ಸವಿದವರು ಮರೆಯಲಾರರು. ತುಂಬು ಮಾತಿನ ಅಂಬಿಕಾತನಯರು ಮೈ

ದುಂಬಿ ಹಾಡಿದ ಅಮರ ಹಾಗೂ ಅಮಲಗೀತಗಳು ನಮಗೆ ತಿಳಿಯದಂತೆ ಹೃದಯವನ್ನು ಹೊಕ್ಕು ಅಲ್ಲಿ ಖಾಯಂ ಠಾಣ್ಯ ಹೂಡುವುವು. ಆದುದರಿಂದ ಅವುಗಳ ಮಾಧುರ್ಯವೇ ಅವಕ್ಕೆ ವ್ಯಾಖ್ಯಾನವಾಗಿದೆ–ಮತ್ತೆ ಮಾತಾಡಿದರೆ ಪುನರುಕ್ತಿ ದೋಷ ಉಂಟಾದೀತು!

ಅನುಬಂಧ

ಉದಾಹೃತ ಪದ್ಯ	ಪುಸ್ತಕದ ಹೆಸರು	ಪುಟಸಂಖ್ಯೆ	ಪಂಕ್ತಿಸಂಖ್ಯೆ
1 ಕವನ	ನಾದಲೀಲೆ	80	1—8
2 ಭಾವಗೀತ	ನಾದಲೀಲೆ	84	1-2, 7, 10-11
3 ಗಾಯತ್ರೀ ಸೂಕ್ತ	ಹಾಡು-ಪಾಡು	50	1—4
4 ಕವನ	ನಾದಲೀಲೆ	80	15—16
5 ಸಖೀಗೀತ	ಸಖೀಗೀತ	83	5—6, 17—20
6 ಬಾರೋ ಸಾಧನ-ಕೇರಿಗೆ	ಗಂಗಾವತರಣ	10	9—14
7 ಹುಬ್ಬಳ್ಳಿಯಾಂವಾ	ಸಖೀಗೀತ	47	3—6
8 ಪಾತರಗಿತ್ತಿ ಪಕ್ಕ	ಗರಿ	96	1—8
9 ಕುಣಿಯೋಣು ಬಾರs!	ಗರಿ	121	1–4
10 ಬೆಳುದಿಂಗಳ ನೋಡs	ನಾದಲೀಲೆ	73	3—20
11 ಕನ್ನಡ ಮೇಘದೂತ	ಕನ್ನಡ ಮೇಘದೂತ	22	15-16
12 ಕನ್ನಡ ಮೇಘದೂತ	ಕನ್ನಡ ಮೇಘದೂತ	23	9-10
13 ಮಾಯಾಕಿನ್ನರಿ	ಸಖೀಗೀತ	5	9-10, 13-16, 21-24
ಮಾಯಾಕಿನ್ನರಿ	ಸಖೀಗೀತ	6	9-12
14 ಭಾವಗೀತ	ನಾದಲೀಲೆ	84	4—5
15 ಸಖೀಗೀತ	ಸಖೀಗೀತ	76	9-16

ಉದಾಹೃತ ಪದ್ಯ	ಪುಸ್ತಕದ ಹೆಸರು	ಪುಟ ಸಂಖ್ಯೆ	ಪಂಕ್ತಿ ಸಂಖ್ಯೆ
16 ತುಂಬಿ	ಗಂಗಾವತರಣ	106	1—4
ತುಂಬಿ	ಗಂಗಾವತರಣ	107	17-20
17 ಸಖೀಗೀತ	ಸಖೀಗೀತ	65	7—8
18 ಕುಣಿಯೋಣು ಬಾರs !	ಗರಿ	122	1—4
19 ರಸಿಕಾ ಪೇಳೊ	ಗರಿ	33	
20 ನಾನೊಂದು ನೆನೆದರೆ	ನಾದಲೀಲೆ	54	1—4
21 ಮದ್ಯ	ನಾದಲೀಲೆ	17	13-16
22 ಸಚ್ಚಿದಾನಂದ	ನಾದಲೀಲೆ	48	16-17
23 ಅವರ್ಣನೀಯ ಅವಾರ್ಚೀನ ಸೌಂದರ್ಯ	ನಾದಲೀಲೆ	53	1—2
24 ಲಕ್ಷ್ಮಿ	ಉಯ್ಯಾಲೆ	67	1—6
25 ಸಖೀಗೀತ	ಸಖೀಗೀತ	87	9-10
26 ಶ್ರಾವಣದ ವೈಭವ	ಸಖೀಗೀತ	32	17-20
27 ನರಬಲಿ	ಗರಿ	67	1-10,13-14
ನರಬಲಿ	ಗರಿ	68	9-19
ನರಬಲಿ	ಗರಿ	69	3-4,11-17
28	ಜೀವನದ ಹಿಂದಿನ ಸಂಚಿಕೆ		
29 ಕುರುಡು ಕಾಂಚಾಣಾ	ನಾದಲೀಲೆ	38	4-12,22-24
30 ಮೂವತ್ತಮೂರು ಕೋಟಿ	ಗರಿ	51-52	13-17
31 ಮನುವಿನ ಮಕ್ಕಳು	ನಾದಲೀಲೆ	30	13-16, 19-24
32 ಅನ್ನಾವತಾರ	ನಾದಲೀಲೆ	35	1—6
33 ಹೆಣದ ಹಿಂದೆ	ನಾದಲೀಲೆ	68	1-11

ಉದಾಹೃತ ಪದ್ಯ	ಪುಸ್ತಕದ ಹೆಸರು	ಪುಟ ಸಂಖ್ಯೆ	ಪಂಕ್ತಿ ಸಂಖ್ಯೆ
34 ಶೂನ್ಯ	ನಿರಾಭರಣಸುಂದರಿ	50	0-18
35 ನಲ್ಲನಲ್ಲೆಯರ ಲಲ್ಲೆ	ಸಖೀಗೀತ	49	5—8
36 ಕೆಲಸವಿಲ್ಲದವರ ಹಾಡು	ಗರಿ	109-110	20-25, 31-32
37 ಪತಿತ	ಉಯ್ಯಾಲೆ	79	1—2
38 ಬಾಳಿದೆಯ ಶೂಲ	ಉಯ್ಯಾಲೆ	50	9-12
39 ದಬ್ಬಾಳಿಕೆಗೆ	ಉಯ್ಯಾಲೆ	46	1-12
40 ಬೆಳುದಿಂಗಳ ನೋಟ	ನಾದಲೀಲೆ	76	21-25
41 ಕುಣಿಯೋಣು ಬಾರs!	ಗರಿ	124	8-11
42 ಪಾರಿನೋಟ	ಮೂರ್ತಿ ಮತ್ತು ಕಾಮಕಸ್ತೂರಿ	1	1-10
43 ದಿನದ ಹಾಡು	ಗರಿ	39	7—8
44 ಚಿರಂತನ	ಸಖೀಗೀತ	51	1—8
45 ಮನದನ್ನೆ	ನಾದಲೀಲೆ	63-64	21-22, 1—7
46 ಮನದನ್ನೆ	ನಾದಲೀಲೆ	66	2—9
47 ಮಾಯಾಕಿನ್ನರಿ	ಸಖೀಗೀತ	6	17-18
48 ಬರುವುದೇನೆ ನೆಪ್ಪಿಗೆ	ಗಂಗಾವತರಣ	23	1-16
49 ಗಂಡುಸು ಹೆಂಗಸಿಗೆ	ಗರಿ	7	1
50 ಶಕ್ತಿ	ಗರಿ	23	13-16
51 ಗಂಗಾವತರಣ	ಗಂಗಾವತರಣ	4	1-11
52 ಸಖೀಗೀತ	ಸಖೀಗೀತ	104	17-18

ಉದಾಹೃತ ಪದ್ಯ	ಪುಸ್ತಕದ ಹೆಸರು	ಪುಟ ಸಂಖ್ಯೆ	ಪಂಕ್ತಿ ಸಂಖ್ಯೆ
53 ಸಚ್ಚಿದಾನಂದ	ನಾದಲೀಲೆ	69	3-17
54 ನಾವು ಬರತೇವಿನ್ನ	ಹಾಡು-ಪಾಡು	27	1—4
55	ವಿವಿಧ ಸಂಕಲನಗಳಿಂದ		
56 ಕೊನೆಯ ಹಾಡು	ಮೂರ್ತಿ ಮತ್ತು ಕಾಮಕಸ್ತೂರಿ	19	4—6
57 ಸಖೀಗೀತ	ಸಖೀಗೀತ	84	9-10
58 ಕನಸಿನೊಳಗೊಂದು ಕಣಸು	ಗರಿ	37	6—7
59 ಒಂದೇ ಕರ್ನಾಟಕ	ಗಂಗಾವತರಣ	43	3—7
60 ಅನ್ನ ಯಜ್ಞ	ಗಂಗಾವತರಣ	57	13-18
61 ಸಖೀಗೀತ	ಸಖೀಗೀತ	65	11-12
62 ಸಚ್ಚಿದಾನಂದ	ನಾದಲೀಲೆ	46	20-21
63 ಮಾಯಾಕಿನ್ನರಿ	ಸಖೀಗೀತ	6	6-12
64 ಹುತsದ ಹುಣಸಿ	ಸಖೀಗೀತ	38	21-28
65 ಶ್ರಾವಣ	ಹಾಡು-ಪಾಡು	21	1-10
66 ಕೊಳಲನೂದಿದ (ಮೂರನೆಯ ಹಾಡು)	ಹಾಡು-ಪಾಡು	20	5—8

ಮಣಿಪಾಲ ಪವರ್ ಪ್ರೆಸ್, ಮಣಿಪಾಲ.